ಥಾಣೆ ಬಂಟ್ಸ್ ಎಸೋಸಿಯೇಶನ್‌ನ

# ಸ್ನೇಹ ಸೌರಭ

101, Jai Shankar CHS Ltd., Opp. Axis Bank, LBS Marg, Hari Niwas, Thane (W) - 400602.
Tel. 7506371586 ● e-mail : thanebunts@gmail.com ● Website : thanebunts.org

ಅಕ್ಟೋಬರ್-ಡಿಸೆಂಬರ್ 2024 SNEHA SAURABHA OCTOBER-DECEMBER 2024






# AMRUTHESHWARA ENGLISH MEDIUM HIGH SCHOOL


**Vamanjoor, Mangaluru, D.K. - 575028.**


**ISO Certified School**




## Janu Shetty Memorial Educational and Charitable Trust (R.)

*Imparting Holistic Education Since 1999*


With Best Compliments from
SHRINIVAS
BOARDING & LODGING
Best Wishes From MR. VENUGOPAL L. SHETTY.
SHRINIVAS
BOARDING & LODGING
Super Delux Rooms
Delux Rooms
Semi Delux Rooms
Add. : Balaji Towers, Suratkal, N.H. Junction, Suratkal, Karnataka.
Ph. : 0824 2476633 / 2478833.
Email : shrinivaslodiging@yahoo.com
Website : www.shrinivaslodge.com



"ನಿಮ್ಮನ್ನು ನೀವು ಜಯಿಸಿ,
ಆಗ ಇಡೀ ಜಗತ್ತೇ
ನಿಮ್ಮದಾಗುತ್ತದೆ."
- ಸ್ವಾಮಿ ವಿವೇಕಾನಂದ

# ಸ್ನೇಹ ಸೌರಭ
# SNEHA SAURABHA


## ಥಾಣೆ ಬಂಟ್ಸ್ ಎಸೋಸಿಯೇಶನ್

101, ಜೈಶಂಕರ್ ಕೋ. ಆಪರೇಟಿವ್ ಹೌಸಿಂಗ್ ಸೊಸೈಟಿ ಲಿ.
ಆಕ್ಸಿಸ್ ಬ್ಯಾಂಕಿನ ಎದುರು, ಎಲ್.ಬಿ.ಎಸ್. ಮಾರ್ಗ, ಹರಿನಿವಾಸ,
ಥಾಣೆ (ಪ) - 400 602 • ಮೊಬೈಲ್ : 7506371586
e-mail : thanebunts@gmail.com / web : www.thanebunts.org

ಸಂಪುಟ–16 | ಅಕ್ಟೋಬರ್ – ಡಿಸೆಂಬರ್ 2024 | ಸಂಚಿಕೆ–04



**ಕಾರ್ಯಾಧ್ಯಕ್ಷರು**
ಸುರೇಶ್ ಶೆಟ್ಟಿ, ಕಡಂದಲೆ
**ಪ್ರಧಾನ ಸಂಪಾದಕರು**
ಡಾ. ಕರುಣಾಕರ್ ಶೆಟ್ಟಿ
**ಉಪ ಸಂಪಾದಕರು**
ಶ್ರೀಮತಿ ಪ್ರಮೋದ ಮಾಡ
**ಸಂಪಾದಕ ಮಂಡಳಿ**
ಭಾಸ್ಕರ ಎನ್. ಶೆಟ್ಟಿ
ಜ್ಯೋತಿ ಎನ್. ಶೆಟ್ಟಿ
**ಗೌರವ ಸಲಹೆಗಾರರು**
ಡಿ. ಜಿ. ಬೋಳಾರ್
ಭಾಸ್ಕರ ಎಂ. ಶೆಟ್ಟಿ
ಕೇಶವ ಎಂ. ಆಳ್ವ
ಎನ್. ಶೇಖರ ಶೆಟ್ಟಿ
ರವೀಂದ್ರ ಎಂ. ಶೆಟ್ಟಿ
**ಸಲಹೆ ಸಮಿತಿ**
ಸಿಎ ಕರುಣಾಕರ್ ಶೆಟ್ಟಿ
ಸಿಎ ಜಗದೀಶ್ ಶೆಟ್ಟಿ
ಚಂದ್ರಹಾಸ ಎಸ್. ಶೆಟ್ಟಿ
ಕುಶಲ ಸಿ. ಭಂಡಾರಿ
ವೇಣುಗೋಪಾಲ ಎಲ್. ಶೆಟ್ಟಿ
ಸುನಿಲ್ ಜೆ. ಶೆಟ್ಟಿ
ಅಶೋಕ್ ಎಂ. ಶೆಟ್ಟಿ
**ಪ್ರಕಾಶಕರು**
ಜಗದೀಶ ಶೆಟ್ಟಿ, ಕನಕ



**ಥಾಣೆ ಬಂಟ್ಸ್ ಎಸೋಸಿಯೇಶನ್**
101, ಜೈಶಂಕರ್ ಕೋ.ಆಪ್.ಹೌಸಿಂಗ್
ಸೊಸೈಟಿ ಲಿ., ಆಕ್ಸಿಸ್ ಬ್ಯಾಂಕಿನ ಎದುರು,
ಎಲ್. ಬಿ. ಎಸ್. ಮಾರ್ಗ,
ಹರಿ ನಿವಾಸ, ಥಾಣೆ (ಪ) - 400 602.
ದೂರವಾಣಿ : 022 - 6561 6162
e-mail : thanebunts@gmail.com
web : www.thanebunts.org


## ಸ್ನೇಹ ಸಿಂಚನ :


1. ಸಂಪಾದಕರ ನುಡಿ
2. ಪಾಲಿಸು ಶಾರದೆ (ಕವನ)
3. ಗೌ. ಪ್ರಧಾನ ಕಾರ್ಯದರ್ಶಿ ಮಾತು
4. ಗುರುವೇ ಸಕಲವು (ಕವನ)
5. ನಮಗಿಂದು ಮಾರ್ಗದರ್ಶಕರಿದ್ದಾರೆಯೇ?
6. ಜಗದ ಅಕ್ಕ (ಕವನ)
7. ರಾಮಾಯಣದ ಕುರಿತು ಇನ್ನೊಂದು ನೋಟ
8. ಅವಳೇ ನನ್ನ ತಂಗಾಳಿ (ಕವನ)
9. ಕನ್ನಡ ನಾಡಿನ ವೀರ ರಮಣಿ ಚೆನ್ನಮ್ಮ
10. ನಿದ್ರಾ ಸಮಯ : ಯಾವುದು ಹಿತ?
11. ನೆನಪಿನಂಗಳದಲ್ಲಿ ಶಿಮುಂಜೆ
12. ಬಿಸಿಲೂರು ಚೆಲುವೆಯ ಹಸಿರೂರ ಹೆಬ್ಬಯಕೆ (ಕವನ)
13. ಮುಪ್ಪು ಬಂದಿತಲ್ಲ ಪಾಯಸ ತಪ್ಪದೆ ಉಣಲಿಲ್ಲ!
14. ದೀಪ ಆರಲೇ ಇಲ್ಲ! (ಕವನ)
15. ವಚನ ಬೆಳಗು
16. ವೈದ್ಯ ಮತ್ತು ರೋಗಿಗಳ ಭಾವನಾತ್ಮಕ ಸಂಬಂಧಗಳಿಗೆ ಒತ್ತು ಕೊಡುವ 'ವೈದ್ಯನ ಕೋಣೆಯಲ್ಲಿ ಒಂದು ಇಣಕು' ಕೃತಿ
17. ಜನಕನ ಸೋಲು / ಕಾಜಿಗಾರೆ ಜಾಲ್‌ಗ್ ಬೈದೆ? (ಕವನ)


○○○

## ಮುಖ ಪುಟ

1. **ಬೊಂಬೆ ಬಂಟ್ಸ್ ಅಸೋಸಿಯೇಶನ್ ಆಯೋಜಿಸಿದ ಯುವಿಕಾ ಕಾರ್ಯಕ್ರಮದಲ್ಲಿ ಭಾಗವಹಿಸಿದ ಥಾಣೆ ಬಂಟ್ಸ್‌ನ ಯುವ ವಿಭಾಗ.**
2. **ಥಾಣೆ ಬಂಟ್ಸ್‌ನ ಯುವ ವಿಭಾಗ ಆಯೋಜಿಸಿದ ಗರ್ಭಾ ನೃತ್ಯ.**


(ಸ್ನೇಹ ಸೌರಭ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನದ ಅಭಿಪ್ರಾಯಗಳು ಆಯಾಯ ಲೇಖಕರಿಗೆ ಸಂಬಂಧಪಟ್ಟಿದ್ದು. ಪತ್ರಿಕೆ ಯಾವುದೇ ಜವಾಬ್ದಾರಿಗೆ ಹೊಣೆಯಲ್ಲ.)

**ಸಂಪಾದಕರ ನುಡಿ**

# ಮರಳಿ ಯತ್ನವ ಮಾಡು

ಮಾನವನ ಬದುಕಿನಲ್ಲಿ ಸದಾ ಎಲ್ಲವೂ ನಾವೆಣಿಸಿದಂತೆ ನಡೆಯುವುದು ಸಾಧ್ಯವಿಲ್ಲ. ಅದಕ್ಕೆ ನಾವು ಅದನ್ನು ಜೀವನ ಎಂದು ಕರೆಯುತ್ತೇವೆ. ಒಮ್ಮೊಮ್ಮೆ ಕೆಲವರ ಜೀವನದಲ್ಲಿ ಸಫಲತೆ ಸುಲಭದಲ್ಲಿ ದೊರೆತರೂ ಇನ್ನು ಕೆಲವರ ಬದುಕಿನಲ್ಲಿ ಅದಕ್ಕೆ ಅವರು ಸಾಕಷ್ಟು ಹೋರಾಟವನ್ನೇ ಮಾಡಬೇಕಾಗುತ್ತದೆ.

ಇದಕ್ಕೆ ಒಂದು ಒಳ್ಳೆಯ ಉದಾಹರಣೆ ಬಾಲಿವುಡ್ ನಲ್ಲಿ 'ಬಿಗ್ ಬಿ' ಎಂದೇ ಅಬಾಲವೃದ್ಧರಿಂದ ಪ್ರೀತಿಯಿಂದ ಕರೆಯಲ್ಪಡುತ್ತಿರುವ ಏಕಮಾತ್ರ ನಟ ಅಮಿತಾಬ್ ಬಚ್ಚನ್. ಅವರು ಸಣ್ಣ ಪುಟ್ಟ ಮಕ್ಕಳಿಂದ ತೊಡಗಿ ಮೂರು ತಲೆಮಾರಿನ ಜನರು ಅವರ ನೈಜ ಅಭಿನಯವನ್ನು ಕಂಡು ಅವರನ್ನು ಮೆಚ್ಚಿ ಕೊಂಡಿದ್ದಾರೆ. ಇದು ಮಾತ್ರವಲ್ಲದೆ ಟಿ.ವಿ. ಮಾಧ್ಯಮದ ರಿಯಾಲಿಟಿ ಶೋಗಳಲ್ಲಿ ಅವರ ನಿರೂಪಣಾ ಶೈಲಿಯನ್ನು ಮೆಚ್ಚಿ ಕೊಳ್ಳದವರು ಯಾರೂ ಇರಲಾರರು.

ಐದು ದಶಕಗಳಲ್ಲಿ ಸುಮಾರು 200ಕ್ಕೂ ಅಧಿಕ ಚಲನಚಿತ್ರಗಳಲ್ಲಿ ನಟಿಸಿ ಆರು ರಾಷ್ಟ್ರೀಯ ಪುರಸ್ಕಾರ ಹಾಗೂ 16 ಬಾರಿ ಫಿಲಂಫೇರ್ ಪ್ರಶಸ್ತಿಗಳು ಒಳಗೊಂಡಂತೆ ಇನ್ನೂ ಹತ್ತು ಹಲವು ಪ್ರಶಸ್ತಿ, ಪುರಸ್ಕಾರಗಳನ್ನು ಪಡೆದು ಅವರು ಹೊಸ ದಾಖಲೆಯನ್ನೇ ನಿರ್ಮಿಸಿದ್ದಾರೆ ಎಂದರೆ ಇದು ಖಂಡಿತ ಅತಿಶಯೋಕ್ತಿಯ ಮಾತಾಗಲಾರದು. ಇಂತಹ ಅಮಿತಾಬ್ ಬಚ್ಚನ್ ಕೂಡಾ ತಮ್ಮ ಬಾಳಿನಲ್ಲಿ ಅನೇಕ ಸಂಘರ್ಷಗಳನ್ನು ಎದುರಿಸಿ ತನ್ನ ಬೂದಿಯಿಂದಲೇ ಎದ್ದ ಫಿನಿಕ್ಸ್ ಪಕ್ಷಿಯಂತೆ ಸೋಲಿನ ಪರಂಪರೆಯನ್ನು ಎದುರಿಸಿ ಜಯಶೀಲರಾದದ್ದು ಇಂದು ಇತಿಹಾಸ. ಅಮಿತಾಬ್ ಬಚ್ಚನ್ ಅವರ ಜನ್ಮ 11 ಅಕ್ಟೋಬರ್ 1942ರಂದು ಅಲಹಾಬಾದ್ (ಈಗಿನ ಪ್ರಯಾಗ್ ರಾಜ್) ನಲ್ಲಿ ಆಯಿತು. ತಂದೆ ಹಿಂದಿ ಭಾಷೆಯ ಪ್ರಸಿದ್ಧ ಕವಿ ಹರಿವಂಶ ರಾಯ್ ಬಚ್ಚನ್, ತಾಯಿ ತೇಜಿ ಬಚ್ಚನ್. ಆಕೆಯು ಸಾಮಾಜಿಕ ಕಾರ್ಯಕರ್ತೆಯಾಗಿದ್ದರು. ಅಮಿತಾಬ್ ಅವರಿಗೆ ಮೊದಲು ಇಂಕ್ವಿಲಾಬ್ ಎಂಬ ಹೆಸರನ್ನು ಇಡಲಾಗಿತ್ತು. ಆಗ ನಮ್ಮ ಭಾರತ ದೇಶದ ಸ್ವಾತಂತ್ರ್ಯ ಹೋರಾಟ ಬಹಳ ಬಿರುಸಿನಿಂದ ನಡೆಯುತ್ತಿರುವ ಕಾಲವಾಗಿದ್ದ ಕಾರಣ ಕ್ರಾಂತಿ ಎನ್ನುವ ಅರ್ಥ ಬರುವ ಈ ಹೆಸರನ್ನು ಇಟ್ಟಿದ್ದರು. ಮುಂದೆ ಪ್ರಸಿದ್ಧ ಕವಿ ಸುಮಿತ್ರಾ ನಂದನ್ ಪಂತ್ ಅವರು ಅಮಿತಾಬ್ ಎನ್ನುವ ಹೆಸರು ಸೂಚಿಸಿದ ಕಾರಣ ಇಂಕ್ವಿಲಾಬ್ ಬದಲಾಗಿ ಅಮಿತಾಬ್ ಎಂದು ಕರೆಯಲ್ಪಟ್ಟರು.



ಅವರ ಮಾಧ್ಯಮಿಕ ಶಿಕ್ಷಣವು ಅಲಹಾಬಾದ್‌ನ ಬಾಲಕರ ಶಾಲೆಯಲ್ಲಿ ಹಾಗೂ ಕಾಲೇಜ್ ಶಿಕ್ಷಣವು ನೈನಿತಾಲ್‌ನ ಶೇರವುಡ್ ಕಾಲೇಜ್‌ನಲ್ಲಿ ನಡೆಯಿತು. 1962ರಲ್ಲಿ ದೆಹಲಿ ವಿಶ್ವ ವಿದ್ಯಾನಿಲಯದ ಕಿಶೋರಿ ಮಾಲ್ ಕಾಲೇಜ್‌ನಿಂದ ವಿಜ್ಞಾನ ಪದವಿಯನ್ನೂ ಪಡೆದ ಶ್ರೇಯ ಇವರದ್ದು. ಇದಾದ ನಂತರ ಅವರು ಉದ್ಯೋಗಕ್ಕಾಗಿ ಕೆಲವೆಡೆ ಪ್ರಯತ್ನ ಮಾಡುತ್ತಾರೆ. 60ರ ದಶಕದಲ್ಲಿ ದೆಹಲಿಯ ಪ್ರಸಿದ್ಧ ಆಲ್ ಇಂಡಿಯಾ ರೇಡಿಯೋದಲ್ಲಿ ಸುದ್ದಿ ವಾಚಕರಾಗಲು ಬಯಸಿ ಅರ್ಜಿ ಸಲ್ಲಿಸಿದರು. ಆದರೆ ಗಡಸು ಧ್ವನಿಯ ಕಾರಣಕ್ಕೆ ಅವರು ಆಡಿಶನ್‌ನಲ್ಲಿ ವಿಫಲರಾಗುತ್ತಾರೆ.

ಇದರಿಂದ ಬೇಸರಗೊಂಡ ಅವರು ಕೊಲ್ಕೋತ್ತಾಕ್ಕೆ ಹೋಗಿ ಅಲ್ಲಿಯ ಕೆಲವು ಕಂಪನಿಗಳಲ್ಲಿ ಅತ್ಯಂತ ಕಡಿಮೆ ಸಂಬಳಕ್ಕೆ ದುಡಿಯುತ್ತಾರೆ. ಆದರೆ ಅವರು ತಾನೋರ್ವ ಚಿತ್ರನಟನಾಗಬೇಕೆಂಬ ಆಸೆ ಅವರನ್ನು ಮುಂಬೈ ಮಹಾನಗರಕ್ಕೆ ಕರೆತಂದಿತು. ಮೃಣಾಲ್ ಸೇನ್ ಅವರ ಚಲನಚಿತ್ರ ಭುವನ್ ಶೋಮ್‌ನಲ್ಲಿ ಅವರು ಧ್ವನಿ ನಿರೂಪಕರಾಗಿ ಚಲನಚಿತ್ರ ಕ್ಷೇತ್ರಕ್ಕೆ ಕಾಲಿರಿಸುತ್ತಾರೆ. ಇದಕ್ಕೂ ಮೊದಲು ಒಂದಿಷ್ಟು ಕಾಲ ರಂಗ ಭೂಮಿಯಲ್ಲೂ ಕೆಲಸವನ್ನು ಮಾಡುತ್ತಾರೆ. 'ಸಾತ್ ಹಿಂದೂ ಸ್ಥಾನಿ' ಅವರು ನಟಿಸಿದ ಮೊದಲ ಚಲನಚಿತ್ರವಾಗಿದ್ದರೂ ಇದರಲ್ಲಿ ಏಳು ಮಂದಿ ನಾಯಕರು ಅಭಿನಯಿಸಿದ್ದರು. ಅವರು ನಟಿಸಿರುವ 'ಬೋಂಬೆ ಟು ಗೋವಾ' ಚಿತ್ರದಲ್ಲಿ ಅರುಣಾ ಇರಾನಿ ನಾಯಕಿಯಾಗಿ ನಟಿಸಿದ್ದರು. ಆದರೆ ಅವರು ಹೀಗೆ ಸುಮಾರು 10-12 ಚಲನಚಿತ್ರಗಳಲ್ಲಿ ಅಭಿನಯಿಸಿದರೂ ಅಂತಹ ಯಶಸ್ಸು ಸಿಗಲಿಲ್ಲ. ನಂತರ ಆಗಿನ ಕಾಲದ ಸೂಪರ್ ಸ್ಟಾರ್ ರಾಜೇಶ್ ಖನ್ನಾ ಅವರ ಜೊತೆ ಅಭಿನಯಿಸಿದ 'ಆನಂದ್' ಅವರಿಗೆ ಅತ್ಯುತ್ತಮ ಪೋಷಕ ನಟನೆಯ ಚಿತ್ರ ಎಂದು ಹೆಸರು ತರುವುದರ ಜೊತೆಗೆ ಮೊದಲ ಫಿಲಂಫೇರ್ ಪ್ರಶಸ್ತಿಯನ್ನೂ ತಂದು ಕೊಟ್ಟು ಅವರ ಭವ್ಯ ಭವಿಷ್ಯಕ್ಕೆ ನಾಂದಿ ಹಾಡಿತು.ಇದರ ನಂತರ ಅವರು ಹಿಂದೆ ನೋಡಿದ್ದೇ ಇಲ್ಲ. ಇವರು ಪೊಲೀಸ್

ಅಧಿಕಾರಿಯಾಗಿ ನಟಿಸಿದ 'ಜಂಜೀರ್' ಸಿನಿಮಾ ಇವರನ್ನು ಸೂಪರ್ ಸ್ಟಾರನ್ನಾಗಿಸಿತು. ಈ ಚಿತ್ರ ಅವರಿಗೆ ಸಾಕಷ್ಟು ಪ್ರಸಿದ್ದಿಯನ್ನು ತಂದು ಕೊಡುವುದರ ಜೊತೆ ಜೊತೆಗೆ ಆ್ಯಂಗ್ರಿ ಯಂಗ್ ಮ್ಯಾನ್ (ಕೋಪಿಷ್ಠ ಯುವಕ) ಎನ್ನೋ ಬಿರುದನ್ನೂ ತಂದು ಕೊಟ್ಟಿತು. ಇಲ್ಲಿಂದ ಅವರ ಚಲನಚಿತ್ರ ಕ್ಷೇತ್ರದ ಉತ್ತುಂಗಕ್ಕೇರುವ ಪರ್ವದ ಪ್ರಾರಂಭವಾಯಿತು. 'ದೀವಾರ್' ಮತ್ತು 'ಶೋಲೆ' ಯಂತಹ ಬ್ಲಾಕ್ ಬಸ್ಟರ್ ಸಿನಿಮಾ ಮನೆ ಮನೆಗೆ ಅವರನ್ನು ತಲುಪಿಸಿತು. ಶೋಲೆ ಚಿತ್ರವನ್ನು ಬಿಬಿಸಿ ಫಿಲಂ ಆಫ್ ದಿ ಮಿಲೇನಿಯಂ ಎಂದು ಘೋಷಿಸುತ್ತದೆ.

26 ಜುಲೈ, 1982ರಲ್ಲಿ ಅವರು ನಟಿಸಿರುವ ಕೂಲಿ ಚಿತ್ರದ ಶೂಟಿಂಗ್ ಸಮಯದಲ್ಲಿ ನಡೆದ ದುರಂತದಲ್ಲಿ ಅವರು ಬದುಕಿ ಉಳಿಯುವುದೇ ಕಷ್ಟವೆನ್ನುವ ಪರಿಸ್ಥಿತಿ ನಿರ್ಮಾಣ ಉಂಟಾಯಿತು. ಕೂಲಿ ಚಲನಚಿತ್ರದಲ್ಲಿ ಖಳ ನಾಯಕರಾಗಿ ಪುನೀತ್ ಇಸ್ಸಾರ್ ಅಭಿನಯಿಸಿದ್ದರು. ಅಮಿತಾಭ್ ಹಾಗೂ ಇಸ್ಸಾರ್ ಫೈಟಿಂಗ್ ದೃಶ್ಯದ ಚಿತ್ರೀಕರಣದಲ್ಲಿ ಮೇಜಿನ ತುದಿಯೊಂದು ಅವರ ಹೊಟ್ಟೆಯ ಭಾಗವನ್ನು ಸೀಳಿ ಸಾಕಷ್ಟು ರಕ್ತ ಸ್ರಾವದಿಂದ ಅವರು ನರಳಿ ಕೊನೆಗೆ ಅವರು ಪವಾಡವೆಂಬಂತೆ ಬದುಕುಳಿಯುತ್ತಾರೆ. ಮುಂದೆ ಈ ಚಿತ್ರ ಸೂಪರ್ ಹಿಟ್ ಆಗುತ್ತದೆ.

1996ರಲ್ಲಿ ಎಬಿಸಿ ಕಾರ್ಪೋರೇಶನ್ ಸ್ಥಾಪಿಸುವ ಮೂಲಕ ತಾತ್ಕಾಲಿಕ ನಿವೃತ್ತಿಯನ್ನು ತೆಗೆದುಕೊಂಡು ನಿರ್ಮಾಪಕರಾಗುತ್ತಾರೆ. 1996ರಲ್ಲಿ ಬೆಂಗಳೂರಿನಲ್ಲಿ ಜರಗಿದ ಮಿಸ್ ವರ್ಲ್ಡ್ ಸೌಂದರ್ಯ ಸ್ಪರ್ಧೆಯ ಮುಖ್ಯ ಪ್ರಾಯೋಜಕತ್ವ ವಹಿಸುತ್ತಾರೆ. ಆದರೆ ಲಕ್ಷಾಂತರ ರೂಪಾಯಿಗಳು ನಷ್ಟವಾಗಿ ಸಂಸ್ಥೆಯು ಸಾಲದ ಸುಳಿಯಲ್ಲಿ ಸಿಲುಕಿಕೊಳ್ಳುತ್ತದೆ. ಕಾನೂನು ಸಮರವನ್ನು ಅವರು ಎದುರಿಸಬೇಕಾಗಿ ಬಂತು. ಬ್ಯಾಂಕಿನ ಸಾಲ ವಿಲೇವಾರಿ ಮಾಡುವವರೆಗೆ ಅವರ ಬಂಗ್ಲೆ ಮತ್ತು ಮನೆಗಳನ್ನು ಮಾರದಂತೆ ಅವರಿಗೆ ನಿರ್ಬಂಧ ಹೇರಲಾಯಿತು. ತದ ನಂತರ ಮೇಜರ್, ಲಾಲ್ ಬಾದಶಾಹ್, ಕೋಹರಂನಂತಹ ಚಿತ್ರ ಮಾಡಿದರೂ ಅವು ಕೂಡಾ ಸೋಲುತ್ತವೆ. ಕಷ್ಟಗಳು ಒಂದರ ಮೇಲೆ ಇನ್ನೊಂದು ಬಂದು ಅವರನ್ನು ಘಾಸಿ ಮಾಡುತ್ತವೆ. 2000 ದಲ್ಲಿ ಅವರು 'ಮೋಹಬ್ಬತೇ' ಚಿತ್ರದಲ್ಲಿ ಅಭಿನಯಿಸುತ್ತಾರೆ. ಈ ಚಿತ್ರದಲ್ಲಿ ಶಾರುಖ್ ಖಾನ್ ಪಾತ್ರಕ್ಕೆ ಪ್ರತಿಸ್ಪರ್ಧಿಯಾಗಿ ನಿಷ್ಠುರವಾದಿ ಹಿರಿಯ ಪಾತ್ರವನ್ನು ನಿರ್ವಹಿಸಿ ಅತ್ಯುತ್ತಮ ಪೋಷಕ ನಟನೆಗಾಗಿ ಮೂರನೇ ಫಿಲ್ಮ್‌ಫೇರ್ ಪ್ರಶಸ್ತಿಯನ್ನು ಪಡೆದುಕೊಳ್ಳುತ್ತಾರೆ.

ಅಲ್ಲದೆ ಅದೇ ವರ್ಷ 'ಕೌನ್ ಬನೇಗಾ ಕರೋಡ್‌ಪತಿ'ಯ ಮೊದಲ ಸೀಸನ್‌ಗಳಲ್ಲಿ ಇವರು ನಿರೂಪಕರಾಗಿ ಅಭೂತಪೂರ್ವ ಯಶಸ್ಸನ್ನು ಗಳಿಸುತ್ತಾರೆ. ಅಲ್ಲದೆ ಹಿನ್ನಲೆ ಗಾಯಕರಾಗಿಯೂ ಮತ್ತು ಹಲವಾರು ಕಾರ್ಯಕ್ರಮದ ನಿರೂಪಕರಾಗಿಯೂ ಕಾರ್ಯನಿರ್ವಹಿಸಿದ್ದಾರೆ. ಹತ್ತು ಹಲವಾರು ಚಿತ್ರಗಳಿಗೆ ಧ್ವನಿ ನಿರೂಪಕರಾಗಿಯೂ ಕೆಲಸವನ್ನು ಮಾಡಿ ಸೈ ಎನಿಸಿಕೊಂಡಿದ್ದಾರೆ.

ಅವರ ಬಾಳಿನ ಏಳುಬೀಳುಗಳಲ್ಲಿ ಅವರ ಪತ್ನಿ ಜಯಾ ಬಾಧುರಿ ಯವರ ಸಹಕಾರ ಮೆಚ್ಚುವಂತದ್ದು. ಹೀಗೆ ಮರಳಿ ಯತ್ನವ ಮಾಡಿದ ಕಾರಣವೇ ಅವರು ಇಂದು ಓರ್ವ ಸಫಲ ವ್ಯಕ್ತಿ ಯಾಗಿ ಎಲ್ಲೆಡೆ ಗುರುತಿಸಿಕೊಂಡಿದ್ದಾರೆ. ಅವರ ಬದುಕು ಮುಂದಿನ ಪೀಳಿಗೆಗೆ ಖಂಡಿತ ಮಾರ್ಗದರ್ಶಿಯ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸಬಲ್ಲುದಾಗಿದೆ.

**– ಡಾ. ಕರುಣಾಕರ್ ಎನ್. ಶೆಟ್ಟಿ, ಪಣಿಯೂರು**

**ಕವನ**

## ಪಾಲಿಸು ಶಾರದೆ

**– ಪಾರ್ವತಿ ಶಾಸ್ತ್ರಿ, ಪುತ್ತೂರು**

ವಾಣಿ ಸರಸ್ವತಿ ಬ್ರಹ್ಮನ ರಾಣಿಯೆ
ವೀಣಾಧರಿಯೇ ಗುಣಸದನೆ।
ಗಾನವಿಶಾರದೆ ಕರುಣದಿ ಪಾಲಿಸು
ಧ್ಯಾನಿಪೆನನುದಿನ ಸುಮ ಚರಣೆ॥

ಮಮತೆಯ ವಾರಿಧಿ ಹಂಸವಿಹಾರಿಣಿ
ಸುಮನಸೆ ಸುಚರಿತೆ ಶಾರದೆಯೆ।
ಅಮಿತ ದಯಾಕರಿ ನಂಬಿದೆ ಚರಣವ
ನಮಿಪೆ ಕೃಪಾಕರಿ ಮಂಗಳೆಯೆ॥

ಕರದೊಳು ಪುಸ್ತಕ ಪಿಡಿದಿಹ ದೇವಿಯೆ
ಸುರನರ ಸೇವಿತೆ ಗೀರ್ವಾಣಿ।
ಸ್ಮರಣೆಯ ಮಾಡುವೆ ವಿದ್ಯಾದಾಯಿನಿ
ಹರಸೆನ್ನ ವಿರಿಂಚಿಯ ರಮಣಿ॥

○○○

# ಗೌ. ಪ್ರಧಾನ ಕಾರ್ಯದರ್ಶಿ ಮಾತು

## ಗೆಳೆತನ

ಗೆಳೆತನಕ್ಕೆ ರಾಮಾಯಣ ಮಹಾಭಾರತದಷ್ಟೇ ಪರಂಪರೆ ಇದೆ. ಮಾನವನ ಸೃಷ್ಟಿ ಎಂದು ಈ ಭೂಮಿಯ ಮೇಲೆ ಆಯಿತೋ ಅಂದೇ ಗೆಳೆತನದ ಬೀಜ ಕೂಡಾ ಮೊಳೆಯಿತೆನ್ನಬಹುದು.

ಏಕೆಂದರೆ ಎಲ್ಲಾ ಸಂಬಂಧಗಳ ಅಡಿಗಲ್ಲು ಗೆಳೆತನ ಅಥವಾ ಮೈತ್ರಿ ಎನ್ನುವುದು ಸರ್ವ ವಿಧಿತ. ಮಾನವನು ಸಂಘ ಜೀವಿ. ಅವನೆಂದೂ ಒಂಟಿಯಾಗಿ ಬಾಳಲಾರ. ತನ್ನ ಸುಖ ದುಃಖ ತನ್ನ ಮನಸ್ಸಿನ ಭಾವನೆಗಳನ್ನು ಹಂಚಿಕೊಳ್ಳಲು ಅವನಿಗೆ ಸಮಾಜದ ಇತರ ಸದಸ್ಯರ ಸಹಚರ್ಯದ ಅಗತ್ಯ ಬೇಕೇ ಬೇಕಾಗುತ್ತದೆ.

ಮಾನವನ ಬದುಕಿನಲ್ಲಿ ಗೆಳೆತನಕ್ಕೆ ಇರುವಷ್ಟು ಪ್ರಾಶಸ್ತ್ಯ ಬಹುಶಃ ಬೇರೆ ಯಾವ ಸಂಬಂಧಕ್ಕೂ ಇರಲಾರದು. ಅದಕ್ಕೆಂದರೆ ಮಗುವಿನ ನಿಷ್ಕಲ್ಮಶ ಮನಸ್ಸಿನಂತೆ ನಿಜವಾದ ಗೆಳೆತನದ ಸಂಬಂಧವೂ ಸ್ವಾರ್ಥದ ಪರಿಧಿಯನ್ನು ಮೀರಿ ನಿಲ್ಲಬಹುದು.

ಆದಿಮಾನವನ ಕಾಲದಿಂದಲೂ ಮಾನವ ಗೆಳೆತನದ ಪ್ರಾಮುಖ್ಯತೆಯನ್ನು ಅರಿತುಕೊಂಡಿದ್ದ ಒಂದೆಡೆಯಿಂದ ಇನ್ನೊಂದೆಡೆ ವಲಸೆ ಹೋಗುವಾಗಲೂ ಅವನು ಒಂಟಿ ಯಾಗಿ ಹೋದದ್ದಿಲ್ಲವೆಂದು ಮಾನವ ನಡೆದು ಬಂದ ದಾರಿಯ ಅಭ್ಯಾಸದಿಂದ ನಾವು ತಿಳಿದುಕೊಳ್ಳಬಹುದಾಗಿದೆ. ನಮ್ಮ ಪವಿತ್ರ ಗ್ರಂಥಗಳಾದ ರಾಮಾಯಣ, ಮಹಾಭಾರತ, ಕುರಾನ್ ಮತ್ತು ಬೈಬಲ್‌ನಲ್ಲೂ ಗೆಳೆತನದ ಉಲ್ಲೇಖಗಳು ಬರುತ್ತದೆ. ರಾಮಾಯಣದಲ್ಲಿ ಶ್ರೀರಾಮ ತನ್ನ ವೈರಿ ರಾವಣನ ತಮ್ಮ ವಿಭೀಷಣನನ್ನು ತನ್ನ ಮಿತ್ರರನ್ನಾಗಿಸಿ ಅವನ ಬಾಳನ್ನೇ ಉದ್ದಾರ ಮಾಡಿದ್ದ. ಹಾಗೆ ಅಂಬಿಗ ಗುಹ ಅಲ್ಲದೆ ಸುಗ್ರೀವ ನೊಂದಿಗೂ ಶ್ರೀರಾಮನ ಗೆಳೆತನ ಇತಿಹಾಸ ಪ್ರಸಿದ್ಧ ವಾದುದು.

ಮಹಾಭಾರತದ ಅನನ್ಯ ವೀರ ದಾನಶೂರ ಕರ್ಣ ತನಗೆ ಅಂಗ ರಾಜ್ಯವನ್ನಿತ್ತು ತನಗೊಂದು ಅಸ್ತಿತ್ವವನ್ನು ನೀಡಿದ ದುರ್ಯೋಧನನಿಗಾಗಿ ತನ್ನ ಸರ್ವಸ್ವವನ್ನೂ ಬಲಿ ಕೊಡುತ್ತಾನೆ. ತಾನು ಯಾರು, ಪಾಂಡವರು ಯಾರು ಎಂದು ತಿಳಿದು ಬಂದರೂ ಅವನು ಮಿತ್ರನಿಗೆ ದ್ರೋಹ ಮಾಡದೆ ಗೆಳೆತನಕ್ಕೊಂದು ಹೊಸ ಭಾಷ್ಯ ಬರೆದ.



ಕೃಷ್ಣ ಸುಧಾಮ ಗೆಳೆತನದ ಕಥೆಯಂತೂ ಜಗತ್ ಪ್ರಸಿದ್ಧ ವಾದುದು. ಬಾಲ್ಯ ಮಿತ್ರ ಕೃಷ್ಣನ ಒಂದು ಭೇಟಿ ಸುಧಾಮನ ಬದುಕಿನ ದಿಶೆಯನ್ನೇ ಬದಲಿಸಿತು. ದೇವರ ಅವತಾರ ಕೃಷ್ಣ ಸುಧಾಮ ಏನನ್ನು ಕೇಳದೆ ಇದ್ದರೂ ತಾನಾಗಿಯೇ ಎಲ್ಲವನ್ನೂ ಕೊಟ್ಟಿದ್ದ. ದೇವರಾಗಿದ್ದ ಕೃಷ್ಣ ಪರಮಾತ್ಮನೂ ಕೂಡಾ ಗೆಳೆತನದ ಸೆಳೆತದಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗಿಲ್ಲ ಅಂದ ಮೇಲೆ ಗೆಳೆತನದ ನೆಲೆ ಬೆಲೆಯನ್ನು ನಾವು ತಿಳಿದು ಕೊಳ್ಳಬಹುದು. ಗೆಳೆತನ ಗೆಳೆಯರ ನಡುವಿನ ವಿಶ್ವಾಸದ ಮೇಲೆ ನಿಂತುಕೊಂಡಿರುತ್ತದೆ. ಗೆಳೆಯನೆಂದ ಮೇಲೆ ಅಲ್ಲಿ ಸಂಶಯಕ್ಕೆ ಎಡೆ ಇರಲಾರದು. ಆದರೆ ಕೆಲವೊಮ್ಮೆ ಈ ವಿಶ್ವಾಸವೇ ಗೆಳೆಯನ ಬದುಕನ್ನೇ ಬಲಿ ತೆಗೆದುಕೊಂಡ ಉದಾಹರಣೆಯೂ ನಮಗೆ ಸಿಗುತ್ತದೆ. ಜಾನಪದದಲ್ಲಿ ಬರುವ "ಸಂಗ್ಯಾ ಬಾಳ್ಯಾ" ಇದಕ್ಕೆ ಒಂದು ಉತ್ತಮ ಉದಾಹರಣೆಯಾಗುತ್ತದೆ.

ಬಾಲ್ಯದಲ್ಲಿ ಜೊತೆಯಲ್ಲಿ ಗುರು ಆಶ್ರಮದಲ್ಲಿ ಕಲಿಯುತ್ತಿರುವಾಗ ಗೆಳೆಯನಿಗೆ ಕೊಟ್ಟ ಭಾಷೆ ಮರೆತಾಗ ಅದು ಹೇಗೆ ದ್ವೇಷದಲ್ಲಿ ಕೊನೆಗೊಳ್ಳುತ್ತದೆ ಎನ್ನುವುದಕ್ಕೆ ರಾಜ ದ್ರುಪದ ಮತ್ತು ದ್ರೋಣರು ಉತ್ತಮ ಉದಾಹರಣೆ ಯಾಗುತ್ತಾರೆ. ದ್ರುಪದನನ್ನು ತನ್ನ ಯೋಗ್ಯ ಶಿಷ್ಯರ ಮೂಲಕ ಗೆದ್ದು ಕೊಂಡರೂ ದ್ರೋಣ ದ್ರುಪದನ ರಾಜ್ಯವನ್ನು ಅವನಿಗೆ ಹಿಂದಿರುಗಿಸಿ ಕೊಡುತ್ತಾನೆ. ಇಲ್ಲೂ ನಾವು ಗೆಳೆತನದ ಮಹತ್ವ ತಿಳಿಯಬಹುದಾಗಿದೆ. ಗೆಳೆತನವನ್ನು ನಾವು ಕೇವಲ ಮಾನವ ಸಂಬಂಧದ ತನಕ ಸೀಮಿತಗೊಳಿಸಲಾಗದು. ಮಾನವ ತನ್ನ ಸಾಕು ಪ್ರಾಣಿಗಳ ಜೊತೆಗೂ ಗೆಳೆತನ ಬೆಳೆಸಲು ಬಹುದಾಗಿದೆ. ಮಾತನಾಡಲಾಗದ ಪ್ರಾಣಿಗಳೂ ತಮ್ಮ ಹಾವಭಾವಗಳಿಂದ ತಮ್ಮ ಭಾವನೆಗಳನ್ನು ವ್ಯಕ್ತಪಡಿಸ ಬಲ್ಲವು. ಸಿದ್ಧಾರ್ಥ ಬುದ್ಧನಾಗಲೂ 'ಜಗವೆಲ್ಲ ಮಲಗಿರಲು ಅವನೊಬ್ಬನೆದ್ದ'. ಅವನೂ ಎಲ್ಲವನ್ನು ಬಿಟ್ಟು ಹೊರಡು ವಾಗ ಕಣ್ಣೀರು ಹಾಕುವ ತನ್ನ ಪ್ರೀತಿಯ ಅಶ್ವ ಚೇತಕನನ್ನು ಬಿಟ್ಟು ಹೋಗುವಾಗ ಪಡುವ ಮಾನಸಿಕ ಯಾತನೆ ವರ್ಣಿಸಲಾಗದು. ಹೀಗೆ ಸ್ವಾಮಿ ಬಂಟ ಶ್ವಾನದ ಬಗ್ಗೆ

ಚರಿತ್ರೆಯುದ್ದಕ್ಕೂ ಓದುತ್ತೇವೆ. ಅವುಗಳ ಸ್ವಾಮಿ ಭಕ್ತಿಗಾಗಿ ಕಟ್ಟಿರುವ ಸಮಾಧಿಯ ಉಲ್ಲೇಖವು ಇತಿಹಾಸದ ಪುಟಗಳಲ್ಲಿ ನಮಗೆ ಓದಲು ಸಿಗುತ್ತವೆ.

ಆಪತ್ಕಾಲಕ್ಕೆ ನೆರವಾಗುವವನೇ ನೆಂಟ ಅಥವಾ ಮಿತ್ರನೆಂದು ಆಂಗ್ಲ ಭಾಷೆಯಲ್ಲಿ ಒಂದು ಗಾದೆ ಇದೆ. ನಿಜವಾದ ಮಿತ್ರನ ಪರೀಕ್ಷೆ ಆಪತ್ಕಾಲದಲ್ಲಿ ಆಗುತ್ತದೆ. ತಮ್ಮ ಸ್ವಾರ್ಥ ಸಾಧನೆಗಾಗಿ ಗೆಳೆಯನ ಸುತ್ತ ಧಿಗಿಣ ಹಾಕುವವರು ಅವನ ಜೇಬು ಖಾಲಿ ಎಂದು ತಿಳಿದಾಕ್ಷಣ ಅಲ್ಲಿಂದ ಕಾಲು ಕೀಳುತ್ತಾರೆ. 'ನಗುವಾಗ ಎಲ್ಲರು ನೆಂಟರು ಅಳುವಾಗ ಯಾರೂ ಇಲ್ಲ'

ಮೊಹಮ್ಮದ್ ರಫಿ ಅವರು ಹಾಡಿರುವ ಒಂದೇ ಕನ್ನಡ ಚಿತ್ರಗೀತೆ 'ಒಂದೇ ಬಳ್ಳಿಯ ಹೂಗಳು' ಚಿತ್ರದ ಈ ಹಾಡಿನಂತೆ ನಮ್ಮ ಕೈಯಲ್ಲಿ ಕಾಂಚನ ಕುಣಿಯುತ್ತಿರುವಾಗ ನಮ್ಮ ಸುತ್ತ ಮರ್ಕಟದಂತೆ ತಕ ಥೈ ಎಂದು ಲಾಗ ಹಾಕುವವರು ನಮ್ಮ ಕೈಯಲ್ಲಿ ಹಣ ಇಲ್ಲವೆಂದು ತಿಳಿದರೆ ಅವರ ನೆರಳು ನಮ್ಮಿಂದ ದೂರ ಸರಿಯುತ್ತದೆ. ಗೆಳೆತನಕ್ಕೆ ಜಾತಿಯ ಬಂಧನವಿಲ್ಲ, ಲಿಂಗ ಬೇಧವಿಲ್ಲ, ಯಾರೂ ಯಾರ ಜೊತೆಗೂ ಗೆಳೆತನ ಮಾಡಬಹುದು. ಅದು ನಿಜವಾದ ಗೆಳೆತನವಾಗಿದ್ದರೆ ಅಲ್ಲಿ ಜೀವಕ್ಕೆ ಜೀವ, ಪ್ರಾಣಕ್ಕೆ ಪ್ರಾಣ.

ಗೆಳೆತನ ಅದೊಂದು ಸೂಕ್ಷ್ಮವಾದ ಸಂಬಂಧ. ಆದರೆ ಅದೂ ಅತಿಯಾಗಬಾರದು. ಅತಿ ಸ್ನೇಹ ಗತಿಗೇಡು ಅಲ್ಲದೆ ಅತಿ ಸ್ನೇಹ ಒಡಕಿಗೆ ಮೂಲ ಎನ್ನೋ ಗಾದೆಗಳೇ ಇವೆ. ಆದುದರಿಂದ ಗೆಳೆತನದ ಸಂಬಂಧವೆನ್ನುವುದು ನೇರ ನೂಲಿನ ಹಾಗಿರುವ ಸಂಬಂಧ, ಒಮ್ಮೆ ಅದು ತುಂಡಾದ್ರೆ ಅದನ್ನು ಜೋಡಿಸ್‌ದ್ರೂ ಅಲ್ಲೊಂದು ಸಿಕ್ಕು (ಗಂಟು) ಉಳಿದು ಬಿಡುತ್ತದೆ ಎಂಬುದನ್ನು ನಾವು ಮರೆಯಬಾರದು.

ಪ್ರಾಯಕ್ಕೆ ಬಂದ ಮಕ್ಕಳನ್ನೂ ನಾವು ಗೆಳೆಯರಂತೆ ನೋಡಿಕೊಳ್ಳಬೇಕೆಂದು ಒಂದು ಮಾತಿದೆ. ಈ ರೀತಿಯ ಸಂಬಂಧ ಬೆಳೆದರೆ ನಾವು ಮಕ್ಕಳ ಜೊತೆಗೆ ಒಳ್ಳೆಯ ರೀತಿಯಲ್ಲಿ ವ್ಯವಹಾರ ನಡೆಸಬಹುದು. ಏನೇ ಇರಲಿ ಏನೇ ಬರಲಿ ಗೆಳೆತನಕ್ಕೆ ಸರಿಗಟ್ಟುವ ಸಂಬಂಧ ಇನ್ನೊಂದು ಇರಲಾರದು. ನಾವು ನಮ್ಮ ಥಾಣೆ ಬಂಟ್ಸ್ ಅಸೋಸಿಯೇಶನ್‌ನ ಎಲ್ಲರೂ ಒಳ್ಳೆಯ ಗೆಳೆಯರಾಗೋಣ. ಒಬ್ಬರೊಬ್ಬರನ್ನು ಅರಿತು ಒಳ್ಳೆಯ ಸಮಾಜವನ್ನು ಕಟ್ಟೋಣ.

**– ಶ್ರೀ ಜಗದೀಶ್ ಶೆಟ್ಟಿ, ಕನಕ**
**ಗೌರವ ಪ್ರಧಾನ ಕಾರ್ಯದರ್ಶಿ**
**ಥಾಣೆ ಬಂಟ್ಸ್ ಎಸೋಸಿಯೇಶನ್**

**ಕವನ**

# ಗುರುವೇ ಸಕಲವು

**– ಜಿ. ಟಿ. ಆರ್. ದುರ್ಗ**
**ಜಿ. ಎಚ್. ಎಲ್,** ಬಂಗಾರಪೇಟೆ

ಗುರುವೆ ನಿನ್ನ ಕರುಣೆಯಿಂದ ಮನುಜನಾದ ಜ್ಞಾನಿಯು
ನಿನ್ನ ಜ್ಞಾನ ಬೆಳಕಿನಿಂದ ಬದುಕಿಗೊಂದು ಸ್ಫೂರ್ತಿಯು

ಅಹಾ ಎಂಬ ಅಜ್ಞಾನವನ್ನು ಜ್ಞಾನದಿಂದ ಸುಟ್ಟು
ಶಾಂತಿ ತಾಳ್ಮೆಗಳೆಂಬ ಪ್ರೀತಿ ಮಮತೆ ಕೊಟ್ಟೆ
ನಾನು ನನ್ನದೆನ್ನುವ ಮಹತ್ವವ ತಿಳಿಸಿದೆ
ಬದುಕಿನ ಹಾದಿಗೆ ಮೌಲ್ಯಗಳನು ನೀಡಿದೆ

ಗುರುವೆಂಬ ಎರಡಕ್ಷರದಲ್ಲಿ ಜ್ಞಾನ ಶಕ್ತಿ ಅಡಗಿದೆ
ಕೋಟಿ ಶಾಪ ಇದ್ದರು ಗುರು ಸೇವೆಯಿಂದ ಮುಕ್ತಿಯು
ಗುರುವು ಎಂಬ ಮಮತೆ ಶಿಷ್ಯರಿಗೆ ಯುಕ್ತಿಯು
ಜ್ಞಾನವೆಂಬ ಬಂಗಾರದಿಂದ ಅಕ್ಷರ ಜ್ಞಾನ ನೀಡುವೆ

ಗುರುವಿಗಿಂತ ಅಧಿಕರಿಲ್ಲ ಸೂರ್ಯ ಚಂದ್ರ ಸೃಷ್ಟಿಯು
ಜಗದ ಬೆಳಕಿನಲ್ಲಿ ಗುರುವು ಜ್ಞಾನ ಜನರ ಸ್ಫೂರ್ತಿಯ
ಗುರುವು ಸಕಲ ಜ್ಞಾನ ತಿಳಿದ ಭಂಡಾರವು
ಗುರುವೆ ನಿನ್ನಿಂದಲೆ ಇಂದು ಸರ್ವ ಜನಕ್ಕೆ ಸುಖವು

ooo

# ನಮಗಿಂದು ಮಾರ್ಗದರ್ಶಕರಿದ್ದಾರೆಯೇ?

✍ ಭಾಸ್ಕರ್ ಎನ್. ಶೆಟ್ಟಿ



ಆರೋಗ್ಯಕರ ಸಮಾಜದಲ್ಲಿ ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ಮೌಲ್ಯಗಳ ಸಾಗಾಣಿಕೆ ಮಾಡುವ ವಿಶಾಲ ಹೃದಯದ ಪ್ರಬುದ್ಧ ವ್ಯಕ್ತಿಗಳೇ ಮಾರ್ಗದರ್ಶಕರು. ಕಾಲಕಾಲಕ್ಕೆ ಗುರುತರ ಜವಾಬ್ದಾರಿಯನ್ನು ಕೆಲವು ಪ್ರಗತಿಶೀಲ ಪ್ರಬುದ್ಧರು. ಅತ್ಯಂತ ಪ್ರಾಮಾಣಿಕತೆಯಿಂದ, ನಿರ್ವಂಚನೆ ಯಿಂದ ನಿರ್ವಹಿಸುತ್ತಾ ಬಂದ ಸಮಾಜಮುಖಿಗಳ ಉದಾಹರಣೆಯು ನಮ್ಮ ಮುಂದಿದೆ.

ಆದರೆ ಇಂದಿನ ಈ ವೈಜ್ಞಾನಿಕ ಯುಗದಲ್ಲಿ ಮಕ್ಕಳು, ಯುವಕರು, ಮಹಿಳೆಯರು ಮುಖ್ಯವಾಗಿ ಅನಕ್ಷರಸ್ಥ ಮಹಿಳೆಯರು, ವಿದ್ಯಾರ್ಥಿಗಳು ಇವರುಗಳಿಗೆ ಮಾರ್ಗದರ್ಶನದ ಕೊರತೆ ಎದ್ದು ಕಾಣುತ್ತದೆ. ಅದರಲ್ಲೂ ಮುಖ್ಯವಾಗಿ 15ರಿಂದ 35 ವರ್ಷದ ನಡುವಿನ ಯುವ ಜನಾಂಗಕ್ಕೆ ಉತ್ತಮ ಮಟ್ಟದ ಮಾರ್ಗದರ್ಶನ ಕೊರತೆ ಎದುರಿಸುತ್ತಿದೆ ಎಂದರೆ ತಪ್ಪಾಗಲಾರದು. ಶಿಕ್ಷಣ, ಉದ್ಯೋಗ, ಆರೋಗ್ಯ, ಮದುವೆ, ಕುಟುಂಬ ನಿರ್ವಹಣೆ, ಸಾಮಾಜಿಕ ಜವಾಬ್ದಾರಿ, ಮಾನವೀಯ ಮೌಲ್ಯಗಳ ನಿರ್ವಹಣೆ, ವೈಯಕ್ತಿಕ ಮಾನಸಿಕ ಒತ್ತಡ ಮುಂತಾದ ಮಹತ್ತರ ವಿಷಯಗಳಲ್ಲಿ ನಮ್ಮ ಯುವಕ, ಯುವತಿಯರು ಸ್ಪಷ್ಟವಾದ ತೀರ್ಮಾನ ಕೈಗೊಳ್ಳುವಲ್ಲಿ ಬಹುತೇಕ ವಿಫಲರಾಗುತ್ತಿದ್ದಾರೆ. ಆಳವಾಗಿ ಚಿಂತಿಸಿ ನೋಡಿದರೆ ಬಹುಶಃ ನಮ್ಮ ಯುವ ಜನಾಂಗಕ್ಕೆ ಸಮಯಕ್ಕೆ ತಕ್ಕ ಮಾರ್ಗದರ್ಶನ ಸಿಗುತ್ತಿಲ್ಲ ಎಂದು ಆಭಾಸವಾಗುತ್ತದೆ.

ಕೆಲವು ಕಾರ್ಪೊರೇಟ್ ಸಂಸ್ಥೆಗಳು ವ್ಯಕ್ತಿತ್ವ ವಿಕಸನದ (Personality development) ಕೆಲವು ಸಲಹಾ ಕೇಂದ್ರಗಳನ್ನು ಹುಟ್ಟು ಹಾಕಿರುವುದು ನಿಜವಾದರೂ ಅವುಗಳೆಲ್ಲ ವಾಣಿಜ್ಯೀಕರಣದ ಒಂದು ಭಾಗವೇ ಆಗಿ ಉಳಿದಿದ್ದು ಹಣ ಗಳಿಸಲು ಇರುವ ಪರ್ಯಾಯ ಮಾರ್ಗಗಳಲ್ಲಿ ಒಂದಾಗಿರುವುದು ದುರಾದೃಷ್ಟ. ಜೊತೆಗೆ ಇಂತಹ ವ್ಯಕ್ತಿತ್ವ ವಿಕಸನದ ಕೇಂದ್ರಗಳಲ್ಲಿ ಭಾರತೀಯ ಸಂಸ್ಕೃತಿಯ ಅಥವಾ ಈ ಮಣ್ಣಿನ ಮೂಲಸತ್ವವೇ ಇಲ್ಲದ ಮಾರ್ಗದರ್ಶನ ಕೇಂದ್ರಗಳಾಗಿ ಮಾರ್ಪಟ್ಟಿವೆ.

ಎಸ್‌ಎಸ್‌ಎಲ್‌ಸಿ, ಪಿಯುಸಿ ನಂತರದ ಮಕ್ಕಳ ಶಿಕ್ಷಣದ ಆಯ್ಕೆಗಳ ಬಗ್ಗೆ ಪೋಷಕರಲ್ಲಿ ಆತಂಕ ಮತ್ತು ಗೊಂದಲ ಹಿಂದಿಗಿಂತ ಇಂದು ಅಧಿಕವಾಗಿದೆ. ಮಕ್ಕಳು ತೆಗೆದುಕೊಳ್ಳುವ ಅಂಕಗಳು ಅವರ ಆಸಕ್ತಿ, ಅದಕ್ಕಿರುವ ಅವಕಾಶಗಳನ್ನು ಸರಿಯಾಗಿ ನಿರ್ಧರಿಸಲು ಪೋಷಕರಿಗೆ ಕಷ್ಟವಾಗುತ್ತಿದೆ. ಅದಕ್ಕಿಂತ ಮುಖ್ಯವಾಗಿ ಮಕ್ಕಳು ಒಂದೊಮ್ಮೆ ನಿರೀಕ್ಷಿತ ಅಂಕಗಳನ್ನು ಗಳಿಸದಿದ್ದರೆ ಅಥವಾ ಅನುತ್ತೀರ್ಣರಾದರೆ ಆಗ ಇರುವ ಅವಕಾಶದ ಬಗ್ಗೆಯೂ ಮಾಹಿತಿ ಇರುವುದಿಲ್ಲ. ಸಾಕಷ್ಟು ಅಂಕ ಗಳಿಸಿಯೂ ತಮಗಿಷ್ಟವಾದ ಆಯ್ಕೆ ದೊರಕದಿದ್ದಾಗ ಮಕ್ಕಳ ಜೊತೆಗೆ ಪೋಷಕರು ಕೂಡ ನಿರಾಶರಾಗುವುದು ಸಾಮಾನ್ಯ. ಅಂತಹ ಸಂದರ್ಭಗಳಲ್ಲಿ ಮಕ್ಕಳ ಬದುಕೇ ಮುಗಿದು ಹೋದಂತೆ ವರ್ತಿಸುತ್ತಾರೆ.

ಇನ್ನು ಆರೋಗ್ಯದ ಬಗ್ಗೆ ಆಗುವ ಬದಲಾವಣೆಗಳು, ಅದರ ಚಿಕಿತ್ಸಾ ವಿಧಾನಗಳ ಕುರಿತು ಸರಿಯಾದ ಮಾರ್ಗದರ್ಶನವಿಲ್ಲದೆ ಮಾಧ್ಯಮಗಳ ಜಾಹೀರಾತುಗಳಿಗೆ ಮರುಳಾಗಿ ಆರೋಗ್ಯದ ಜೊತೆಗೆ ಹಣ ಕೂಡ ಕಳೆದುಕೊಳ್ಳುವುದನ್ನು ಕಾಣಬಹುದು. ಉದ್ಯೋಗದ ಆಯ್ಕೆ, ತದನಂತರ ಜೀವನ ಸಂಗಾತಿಗಳ ಆಯ್ಕೆ, ಆ ಸಂದರ್ಭದಲ್ಲಿ ಪೋಷಕರ ಜವಾಬ್ದಾರಿ, ಸಾಮಾನ್ಯ ಕೌಟುಂಬಿಕ ಕಲಹಗಳಿರುವ ವಿಷಯಗಳಲ್ಲಿ ಯುವಕರಷ್ಟೇ ಅಲ್ಲ ಪೋಷಕರು ಕೂಡ ಎಡವುತ್ತಿದ್ದಾರೆ. ಪೊಲೀಸು, ಕೋರ್ಟು, ಕಚೇರಿ ಎಂದು ಅಲೆದಾಡುತ್ತಾ ಸಣ್ಣಪುಟ್ಟ ವಿಷಯಗಳಿಗೂ ಒತ್ತಡವನ್ನು ತಲೆಮೇಲೆ ಎಳೆದುಕೊಂಡು ಆರೋಗ್ಯ ಸಮಸ್ಯೆಗೂ ಒಳಗಾಗುತ್ತಿದ್ದಾರೆ. ಯುವಕರ ಆರ್ಥಿಕ ಸದೃಢತೆ ಕೂಡ ಕುಟುಂಬ ಕಲಹಕ್ಕೆ, ದಾಂಪತ್ಯ ವಿರಸ ಮತ್ತೆ ವಿಚ್ಛೇದನಕ್ಕೆ ಕಾರಣವಾಗುತ್ತಿರುವುದು ದುರಾದೃಷ್ಟ.

ವ್ಯಾಪಾರ, ವ್ಯವಹಾರ, ಸಂಗೀತ, ಸಾಹಿತ್ಯ, ಕಲೆ, ಕ್ರೀಡೆ, ವಿಜ್ಞಾನ ಮುಂತಾದ ಕ್ಷೇತ್ರಗಳಲ್ಲಿ ಆಸಕ್ತಿಯುಳ್ಳವರು, ಸ್ವಂತಿಕೆಯ ಮೇಲೆ ನಂಬಿಕೆ ಇಡದೆ, ಬೆರಳೆಣಿಕೆಯಷ್ಟಿರುವ ಯಶಸ್ಸು ಜನರನ್ನು ಅನುಕರಣೆ ಮಾಡಲು ಹೋಗಿ ಅನೇಕ ವೇಳೆ ತೊಂದರೆಗೆ ಈಡಾಗುತ್ತಿದ್ದಾರೆ. ವ್ಯವಸ್ಥಿತ ಮಾರ್ಗದರ್ಶನದ ಕೊರತೆಯಿಂದಾಗಿ ಬದಲಾದ

ವ್ಯವಸ್ಥೆಯನ್ನು ಗುರುತಿಸಲು ವಿಫಲರಾಗುತ್ತಿದ್ದಾರೆ. ಮೌಲ್ಯಾಧಾರಿತ ಜೀವನಕ್ಕೆ ಬದಲಾಗಿ, ಹಣದ ಹಿಂದೆ ಬಿದ್ದು ಥಳಕು ಬಳುಕಿನ ಜೀವನಶೈಲಿಗೆ ಮುಂದಾಗುತ್ತಿರುವ ಇಂದಿನ ಯುವಕರಿಗೆ ಮಾರ್ಗದರ್ಶನ ಮಾಡುವುದೇ ದೊಡ್ಡ ಸಮಸ್ಯೆಯಾಗಿದೆ.

ಮೊದಲಿದ್ದ ಹಿತೈಷಿಗಳು ಮಾರ್ಗದರ್ಶನ ತಾಂತ್ರಿಕತೆಯ ಹೆಸರಲ್ಲಿ ಬೇಡವಾಗಿದೆ. ಹಿರಿಯರ ಮಾರ್ಗದರ್ಶನಕ್ಕೆ ಪರ್ಯಾಯವಾಗಿ ಸಾಮಾಜಿಕ ಜಾಲತಾಣಗಳಾದ ಇಂಟರ್‌ನೆಟ್, ವಾಟ್ಸಾಪ್, ಇನ್‌ಸ್ಟಾಗ್ರಾಮ್‌ಗಳಲ್ಲಿ ಎಲ್ಲವೂ ಲಭ್ಯ ಎಂಬ ಮಾನಸಿಕ ಸ್ಥಿತಿ ಇಂದಿನ ಜನಾಂಗದ್ದು. ಇದು ಮೇಲ್ನೋಟಕ್ಕೆ ಸರಿ ಹಾಗೂ ಉತ್ತಮ ಬೆಳವಣಿಗೆ ಅನಿಸಿದರೂ ಅದೊಂದು ಅಂತಸತ್ವ ಇಲ್ಲದ ಯಾಂತ್ರಿಕ ಮತ್ತು ನಿರ್ಜೀವ ಸ್ಥಿತಿಯತ್ತ ಯುವ ಜನಾಂಗವನ್ನು ಕೊಂಡೊಯ್ಯುತ್ತಿದೆ ಎನ್ನುವುದು ಅರಿವಾಗುತ್ತಿಲ್ಲ. ಮಾಹಿತಿ ಜ್ಞಾನ ಎಂಬ ತಪ್ಪು ಕಲ್ಪನೆ ಜನಸಾಮಾನ್ಯರಲ್ಲಿ ಮನೆ ಮಾಡಿದೆ. ನಿಜ ಹೇಳಬೇಕೆಂದರೆ ಇದು ವ್ಯಕ್ತಿಯ ಕ್ರಿಯಾಶೀಲತೆ, ಸೃಜನಶೀಲತೆಯನ್ನು ಕೊಲ್ಲುತ್ತಿದೆ. ಇದರ ಪರಿಣಾಮ ಇಂದಿನ ಯುವಕರಲ್ಲಿ ಓದುವ, ಬರೆಯುವ ಹವ್ಯಾಸವೇ ಇಲ್ಲವಾಗಿದೆ. ಹರಿಯುವ ನೀರಿನಂತೆ ಜ್ಞಾನವು ಸಹ ಸದಾ ಚಲಿಸುತ್ತಲೇ ಇರಬೇಕು. ಅದು ನಿಂತ ನೀರಾಗಬಾರದು. ನಮ್ಮೊಳಗಿನ ಅಜ್ಞಾನವನ್ನು ಹುಡುಕಿ ಅದನ್ನು ಹೋಗಲಾಡಿಸುವುದು ಕೂಡ ಜ್ಞಾನದ ಒಂದು ಭಾಗ. ಆದರೆ ಅದರ ಆಳಕ್ಕೆ ಚಿಂತಿಸುವ ತಂತ್ರ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ವಾತಾವರಣವು ಇಂದು ಬಹುತೇಕ ಇಲ್ಲವೆನ್ನಬಹುದು.

ಇವೆಲ್ಲ ಅಪಾಯಕಾರಿ ಬೆಳವಣಿಗೆಯನ್ನು ಸಮಾಜ ಕಣ್ಮುಚ್ಚಿ ನೋಡುತ್ತಿದೆ. ಇದನ್ನೊಂದು ಸವಾಲಾಗಿ ಸ್ವೀಕರಿಸಿ, ಎಲ್ಲಾ ಬದಲಾವಣೆಗಳ ನಡುವೆಯೂ ಸಕಾರಾತ್ಮಕವಾಗಿ ಚಿಂತಿಸಿ ಯುವಪೀಳಿಗೆಗೆ ಪ್ರಬುದ್ಧತೆಯಿಂದ ಕೂಡಿದ ಉತ್ತಮ ಗುಣಮಟ್ಟದ ಮಾರ್ಗದರ್ಶನ ಸಿಗುವಂತೆ ಮಾಡುವ ಜವಾಬ್ದಾರಿ ಹಿರಿಯರು ತೆಗೆದುಕೊಳ್ಳಬೇಕಾದರೆ ಆಗ ಮಾತ್ರ ಮುಂದಿನ ಪೀಳಿಗೆ ಶ್ರೇಷ್ಠ ಮಟ್ಟದ ಜೀವನಶೈಲಿಯನ್ನು ರೂಪಿಸಿಕೊಂಡು ಸಮೃದ್ಧ ಸಮಾಜ ನಿರ್ಮಾಣ ಆಗಬಹುದು. ನಿಜ ಅರ್ಥದಲ್ಲಿ ಜೀವನಮಟ್ಟ ಸುಧಾರಣೆಯಾಗಬಹುದು. ಇದಕ್ಕೆ ಮನೆಗಳಲ್ಲಿ, ಮನಗಳಲ್ಲಿ ಪರಿವರ್ತನೆ ಅಗತ್ಯವಿದೆ. ❍

ಕವನ

# ಜಗದ ಅಕ್ಕ

**- ಡಾ. ಮಹೇಂದ್ರ ಕುರ್ಡಿ**

ಮನವ ಮಲ್ಲಿಗೆ ಮಾಡಿ
ಮಲ್ಲಿಕಾರ್ಜುನಗೆ ತಾ ಶರಣಾಗಿ
ಮೋಹವ ತೊರೆದು ನಿಂತು
ಶಿವಶರಣೆಯಾದಳು ಅಕ್ಕ

ಗಿರಿ ಗುಹೆ ಕಾನನದ ನಡುವೆ
ದಿಟ್ಟ ಹೆಜ್ಜೆ ಹಾಕುತಲಿ
ಚೆಲುವಾದ ನವಿಲ ನರ್ತನದಂತೆ
ನಲಿದು ನಡೆದಳು ಸಂತಸದಿ

ಬೆತ್ತಲೆ ಕಾಯ ನೋಡಿದೊಡೆ
ಕ್ರೂರ ಕಾಮನೆಗಳು ಕೆರಳದಿರಲೆಂದು
ಕೇಶದಿ ತನುವ ಮರೆಮಾಚಿ
ಒಳಗಣ್ಣ ತೆರೆಸಿದ ಮಹಾ ಸಾಧ್ವಿ

ಹೆಣ್ಣು ಅಬಲೆಯಲ್ಲ ಎಂಬಂತೆ
ಅನುಭವ ಮಂಟಪದಿ ತಾ
ವಚನ ಸಾಹಿತ್ಯದ ರುಚಿ ಉಣಿಸಿ
ಅನುಭಾವ ಹಂಚಿ ನಿಂದ ಮಾತೆ

ಭೋಗ ಭಾಗ್ಯ ಜೀವನ ತೊರೆದು
ಭಕ್ತಿ ಮುಕ್ತಿಯ ಮಾರ್ಗ ತೋರಿ
ಮಮತಾ ಮೂರ್ತಿಯೇ ಆದಳು
ಜಗದ ಅಕ್ಕ ಮಹಾದೇವಿ ಅಕ್ಕ

❍❍❍

# ರಾಮಾಯಣದ ಕುರಿತು ಇನ್ನೊಂದು ನೋಟ

✍ ಸುಬ್ರಾಯ ಚೊಕ್ಕಾಡಿ

ವಾಲ್ಮೀಕಿ ಬರೆಯಬೇಕೆಂದಿದ್ದದ್ದು ಆ ಕಾಲದಲ್ಲಿದ್ದ ಆದರ್ಶ ವ್ಯಕ್ತಿಯಾದ ರಾಮನ ಕಥೆಯನ್ನು. ಆದರೆ ಆ ಆದರ್ಶ ರಾಮನ ಪಾತ್ರದ ಮೇಲೆ ಕ್ರೌಂಚವಧೆಯಿಂದ ವಾಲ್ಮೀಕಿ ಪಟ್ಟ ನೋವು ಹೇಗೆ ಪ್ರಭಾವ ಬೀರಿತು ಎಂಬುದನ್ನು ಗಮನಿಸಬೇಕು.

ರಾಮನ ಎದುರು ಅವನ ಪಟ್ಟಾಭಿಷೇಕದ ಸಂದರ್ಭದಲ್ಲಿ ಎರಡು ಆಯ್ಕೆಗಳಿದ್ದವು. ಒಂದು ಅವನು ರಾಜಕುಮಾರನಾಗಿ ಪಾಲಿಸಬೇಕಾದ ರಾಜಧರ್ಮ. ಎರಡನೇದು ದಶರಥನ ಮಗನಾಗಿ ಪಾಲಿಸಬೇಕಾದ ಕುಟುಂಬ ಧರ್ಮ.

ರಾಮ ಅಲ್ಲಿ ಕುಟುಂಬ ಧರ್ಮವನ್ನು ಆರಿಸಿಕೊಂಡು ಕಾಡಿಗೆ ಹೋದ. ಅದರಿಂದಾಗಿ ಅವನೂ ಉದ್ದಕ್ಕೆ ದುಃಖ ಪಡಬೇಕಾಯಿತು. ಈಚೆ ದಶರಥನ ಮರಣ, ಭರತನ ಅಸಮಾಧಾನ ಇತ್ಯಾದಿಗಳಿಂದ ಇಡಿಯ ಅಯೋಧ್ಯೆಯೇ ದುಃಖ ಪಡುವಂತಾಯ್ತು!

ಆಮೇಲೆ ರಾಮ ಅಯೋಧ್ಯೆಗೆ ಹಿಂದಿರುಗಿದ ಮೇಲೆ ಅಗಸನ ಮಾತಿಗಾಗಿ ಕುಟುಂಬದ ಸೀತೆ ಮೊದಲಾದವರನ್ನು ಅಂದರೆ ಕುಟುಂಬ ಧರ್ಮವನ್ನು ಅಲಕ್ಷಿಸಿ ರಾಜಧರ್ಮದಂತೆ ಸೀತಾ ಪರಿತ್ಯಾಗ ಮಾಡಿ ಅವನು ಮಾತ್ರವಲ್ಲ, ಇಡಿಯ ಕುಟುಂಬ ಹಾಗೂ ಅಯೋಧ್ಯೆಯೇ ದುಃಖಿಸುವಂತಾಯ್ತು!

ವಾಲ್ಮೀಕಿಯ ಶೋಕ ಹೀಗೆ ಇಡಿಯ ರಾಮಾಯಣವನ್ನು ಆವರಿಸಿಕೊಂಡಿದೆ. ಎರಡೂ ಸಂದರ್ಭ ಗಳಲ್ಲೂ ಸಿಕ್ಕಿದ್ದು ನೋವು, ದುಃಖಗಳೇ. ಅದನ್ನೇ ಅಡಿಗರ ಈ ಸಾಲುಗಳು ಸಂಗ್ರಹವಾಗಿ ಹೇಳುತ್ತದೆ:

> ಕ್ರೌಂಚವಧದುದ್ವೇಗದಳಲ ಬತ್ತಲೆ ಸುತ್ತ
> ರಾಮಾಯಣ ಶ್ಲೋಕ ರೇಷ್ಮೆ ತೊಗಲು

ಶೋಕ ಶ್ಲೋಕವಾದದ್ದು ಹೀಗೆ!

ಆಧುನಿಕ ಅಸ್ತಿತ್ವವಾದಿಗಳ ದೃಷ್ಟಿಯಿಂದ ಇದು ಆಯ್ಕೆಯ ಸಮಸ್ಯೆ ಎನ್ನಬಹುದು. ಆದರೆ ಸಾಮಾನ್ಯವಾಗಿ ಎಲ್ಲರಿಗೂ ಬದುಕಿನಲ್ಲಿ ಒಂದೇ ಆಯ್ಕೆ ಇರುತ್ತದೆ. ಆದರೆ ರಾಮನಿಗೆ ಎರಡು ಆಯ್ಕೆಗಳಿದ್ದವು ಎಂಬುದೇ ವಿಶೇಷ.

ಅದಕ್ಕೇ ಇರಬೇಕು ಎಕ್ಕುಂಡಿ, ಎಂದಾದರೂ ಒಂದು ದಿನ ಮಿಥಿಲೆಗೆ ಹೋಗಬೇಕು ಅಂದರೇ ವಿನಾ ಅಯೋಧ್ಯೆಗೆ ಹೋಗಬೇಕು ಅನ್ನಲಿಲ್ಲ. ಯಾಕೆಂದರೆ ಅಯೋಧ್ಯೆ ಸಂಘರ್ಷದ ದುಃಖದ ಊರು. ಮಿಥಿಲೆ ಕಾಯಕದ, ಉತ್ತಲ್ಲಿ ಹೆಣ್ಣು ಮಗು ಸಿಗುವ ಊರಾಗಿದ್ದಿರಬೇಕು ಅವರ ಪಾಲಿಗೆ! ○

ಕವನ

## ಅವಳೇ ನನ್ನ ತಂಗಾಳಿ

– ಜಿ. ಟಿ. ಆರ್. ದುರ್ಗ
ಜಿ. ಎಚ್. ಎಲ್, ಬಂಗಾರಪೇಟೆ

ಗಾಳಿ...ತಂಗಾಳಿ...ಬೀಸಿ ಬೀಸಿ ಮಾತಾಡುತ್ತೈತೆ ಗಾಳಿ
ನನ್ನವಳ ಉಸಿರೊಳಗಿನ ಗಾಳಿ... ತಂಗಾಳಿ...

ಅಗೊ ಅಲ್ಲಿ ನೀರಿನಲ್ಲಿ ಅಗೊ ಅಲ್ಲಿ ಅಲೆಗಳಲ್ಲಿ
ಅವಳ ಕಣ್ಣ ರೆಪ್ಪೆಯಲ್ಲಿ ಸುಳಿಯುವ ಗಾಳಿ
ಅವಳ ಎದೆಯ ಮಿಡಿತ ಹೃದಯದಲ್ಲಿ..
ಅವಳ ನಗುವ ಮೊಗದ ಕಾಂತಿಯಲ್ಲಿ.....

ತುಟಿ ಬಿಚ್ಚಿ ನಗುತ್ತೈತೆ ಅವಳ ಕೆನ್ನೆಯಲಿ
ಎಲೆ ಎಲೆಯ ಮೊಗ್ಗಿನಲಿ ಅವಳ ನಡೆಯಲಿ
ಆ ಸಂಜೆಯ ಕೆಂಧೂಳಿಯ ಹೊಂಗನಸಲ್ಲಿ
ಆ ರಾತ್ರಿಯ ಚಂದ್ರಕಾಂತಿ ಹೊಳಪಿನಲ್ಲಿ

ನಸುಗುವಳು ಪರಿಮಳದ ದಳಗಳಲ್ಲಿ
ಸಿಹಿ ತುಂಬಿದ ಮಕರಂದದ ಸವಿ ಜೇನಲ್ಲಿ
ಮೈ ಸೋಕಿದೆ ಆನಂದದ ರೋಮಾಂಚನದಲ್ಲಿ
ಮೇಘ ಮಾಲೆ ಅವಳ ಕೊರಳ ಹೂಮಾಲೆಯಲ್ಲಿ

○○○

# ಕನ್ನಡ ನಾಡಿನ ವೀರ ರಮಣಿ ಚೆನ್ನಮ್ಮ

✍ ಡಾ. ಪ್ರದೀಪಕುಮಾರ್ ಹೆಬ್ರಿ

ಕರುನಾಡ ವೀರಮಹಿಳೆಯರಲ್ಲಿ ಹಿರಿಯ ಸ್ಥಾನ ಕಿತ್ತೂರ ರಾಣಿ ಚೆನ್ನಮ್ಮ ಅವರದ್ದು. ಇವರು ಸ್ವಾತಂತ್ರ್ಯ ಸ್ವಾಭಿಮಾನಗಳ ಸಾಕಾರಮೂರ್ತಿ. ಕಾಗತಿ ದೇಸಾಯಿಯ ಸುಪುತ್ರಿ. ಕಿತ್ತೂರಿನ ದೇಸಾಯಿಗಳಲ್ಲಿ ಪ್ರಸಿದ್ಧನಾದ ಮಲ್ಲಸರ್ಜನ ಕಿರಿಯ ಪತ್ನಿ. ತನ್ನ ಪುಟ್ಟರಾಜ್ಯದ ಸ್ವಾತಂತ್ರ್ಯ ರಕ್ಷಣೆಗಾಗಿ ಬ್ರಿಟಿಷ್ ಸೈನ್ಯದ ವಿರುದ್ಧ ಹೋರಾಟ ಮಾಡಿದ ಧೀಮಂತ ಮಹಿಳೆ. ಕರುನಾಡ ಇತಿಹಾಸದ ಅಪ್ರತಿಮ ಶೂರೆ. ಯುದ್ಧದಲ್ಲಿ ಚೆನ್ನಮ್ಮ ತೋರಿದ ಧೈರ್ಯ, ಸಾಹಸ, ಕೆಚ್ಚು... ಅವಿಸ್ಮರಣೀಯ. ಆದರೆ ಕೊನೆಯ ದಿನಗಳನ್ನು ಬಂಧಿಯಾಗಿ ಸೆರೆಮನೆಯಲ್ಲಿ ಕಳೆದದ್ದು ವಿಷಾದಕರ. ಚೆನ್ನಮ್ಮನಿಂದ ಕಿತ್ತೂರು ವಿಶ್ವ ಪ್ರಸಿದ್ಧಿಯಾಯಿತು. ಕನ್ನಡಿಗರು ಸದಾ ನೆನೆಯಬೇಕಾದ ವೀರ ಕನ್ನಡತಿ, ಸ್ವಾಭಿಮಾನದ ವೀರೆ ಕಿತ್ತೂರು ರಾಣಿ ಚೆನ್ನಮ್ಮ.

ಕಿತ್ತೂರಿನ ದೇಸಾಯಿ ಮಲ್ಲಸರ್ಜನ ಕಾಲದಲ್ಲಿ ಹೈದರಾಲಿ, ಟಿಪ್ಪುಸುಲ್ತಾನ, ಮರಾಠರು ಕಿತ್ತೂರಿನ ಮೇಲೆ ದಾಳಿ ಮಾಡಿದ್ದರು. ಮರಾಠರು ಮಲ್ಲಸರ್ಜನನ್ನು ಸೆರೆ ಹಿಡಿದು ಸೆರೆಮನೆಯಲ್ಲಿರಿಸಿದ್ದರಿಂದ ರಾಣಿ ಚೆನ್ನಮ್ಮನೇ ರಾಜ್ಯದಾಡಳಿತ ಸೂತ್ರವನ್ನು ಹಿಡಿದಿದ್ದಳು. ಸುಮಾರು ಎರಡು ವರ್ಷಗಳ ಕಾಲ ಆಳಿದಳು. ಮಲ್ಲಸರ್ಜ ಬಿಡುಗಡೆಯಾದ. ಕಿತ್ತೂರಿಗೆ ಹಿಂದಿರುಗಿ ಬಂದಂತೆ ತೀರಿಕೊಂಡ. ಮುಂದೆ ಅವನ ಮಗ ಶಿವಲಿಂಗರುದ್ರ ಪಟ್ಟವೇರಿದ. ಎಂಟು ವರ್ಷ ಆಡಳಿತ ನಡೆಸಿ ಅನಾರೋಗ್ಯದಿಂದ ಮೃತ್ಯುವಶನಾದ.

ಚೆನ್ನಮ್ಮನಿಗೆ ಮಕ್ಕಳಿರಲಿಲ್ಲ. ಮಾಸ್ತಮರಡಿ ಗೌಡರ ಮಗ ಶಿವಲಿಂಗಪ್ಪನನ್ನು ದತ್ತು ತೆಗೆದುಕೊಂಡಿದ್ದಳು. ಚೆನ್ನಮ್ಮನೇ ದತ್ತುಪುತ್ರನ ಹೆಸರಿನಿಂದ ರಾಜ್ಯಾಡಳಿತ ಮಾಡತೊಡಗಿದಳು.

ಶಿವಲಿಂಗರುದ್ರ ಸರ್ಜ ಬ್ರಿಟಿಷರ ಪರವಾಗಿದ್ದ. ಹಲವಾರು ವಿಷಯಗಳಲ್ಲಿ ಬ್ರಿಟಿಷರಿಗೆ ಸಹಾಯ ಮಾಡಿದ್ದ. ಖುಷಿಯಿಂದ ಬ್ರಿಟಿಷರು ವಂಶ ಪಾರಂಪರ್ಯವಾಗಿ ಆಡಳಿತ ಮಾಡಲು ಶಿವಲಿಂಗಪ್ಪನಿಗೆ ಸನದು ಕೊಟ್ಟಿದ್ದರು. ಬ್ರಿಟಿಷರಿಗೆ ಆ ಸಮಯದಲ್ಲಿ ಧಾರವಾಡದಲ್ಲಿ ಕಲೆಕ್ಟರ್ ಆಗಿದ್ದವನು ಥ್ಯಾಕರೆ. ಥ್ಯಾಕರೆ ದಖನಿನ ಕಮಿಷನರ್ ಆಗಿದ್ದ ಚಾಪ್ಲಿನ್‌ನ ಜೊತೆಗೂಡಿ ಸಂಚಿಗೆ ಮುಂದಾದ. ದತ್ತುಸ್ವೀಕಾರ ಶಿವಲಿಂಗರುದ್ರ ಮಾಡಿದ್ದಲ್ಲ. ಅವನ ಮರಣಾನಂತರ ಆದುದೆಂದು ಮೇಲಧಿಕಾರಿ ಗವರ್ನರ್ ಎಲ್ಫಿನ್‌ಸ್ಟನ್‌ಗೆ ಸುಳ್ಳು ವರದಿ ಕಳಿಸಿ ಅವರನ್ನು ತಪ್ಪುದಾರಿಗೆ ಎಳೆದ ಮತ್ತು ತನ್ನ ಸತ್ಕಾರದಿಂದ ಉತ್ತರ ಬರುವವರೆಗೆ ಬನ್ನೂರು ಮಲ್ಲಪ್ಪ ಶೆಟ್ಟಿ ಮತ್ತು ವೆಂಕಟ ರಾವ್ ಎಂಬ ಕಾರಭಾರಗಳಿಗೆ ಆಡಳಿತ ವಹಿಸಬೇಕೆಂದು ತಿಳಿಸಿ ಖಜಾನೆಗೆ ಬೀಗ ಹಾಕಲು ಮುಂದಾದ.

ಥ್ಯಾಕರೆ ತನ್ನ ರಾಜ್ಯದ ಕಾರ್ಯಭಾರದಲ್ಲಿ ಅನಾವಶ್ಯಕವಾಗಿ ತಲೆಹಾಕಿದ್ದು ಚೆನ್ನಮ್ಮನ ಸ್ವಾಭಿಮಾನವನ್ನು ಕೆಣಕಿತು. ಸಂಸ್ಥಾನದ ಹಿರಿಯರೊಡಗೂಡಿ ಥ್ಯಾಕರೆಯ ನಿಲುವನ್ನು ಬಲವಾಗಿ ವಿರೋಧಿಸಿದರು. ಆದರೂ ಚೆನ್ನಮ್ಮ ಸಹನಾಮೂರ್ತಿಯಾಗಿ ದತ್ತು ಮತ್ತು ಆಡಳಿತದ ವಿಷಯವಾಗಿ ಪತ್ರ ವ್ಯವಹಾರ ನಡೆಸಿದಳು. ತನ್ನ ಕಿತ್ತೂರು ಸಂಸ್ಥಾನದ ಪರವಾಗಿ ಸಂಧಾನ ನಡೆಸಲು ಲಿಂಗಾಭಟ್ಟ ಮತ್ತು ರಾಚಪ್ಪ ಎಂಬೀರ್ವರು ವಕೀಲರನ್ನು ಕಂಪನಿ ಸರ್ಕಾರಕ್ಕೆ ಕಳಿಸಿದಳು.

ಚೆನ್ನಮ್ಮ ಕ್ರಿಯಾಶೀಲ ವ್ಯಕ್ತಿತ್ವದವಳು. ಸಂಧಾನಕ್ಕೆ ವಕೀಲರನ್ನು ಕಳುಹಿಸಿದ್ದರೂ ಸಂಸ್ಥಾನದ ಅಸ್ತಿತ್ವದ ಕುರಿತಾಗಿ ಕಾರ್ಯಮಗ್ನಳಾಗಿದ್ದಳು. ಎಳವೆಯಿಂದಲೇ ವೀರತನವನ್ನು ಮೈಗೂಡಿಸಿಕೊಂಡಿದ್ದ ಅವಳು ಬೇರೆ ಬೇರೆ ಸ್ಥಳಗಳಲ್ಲಿ ಇರಿಸಿದ್ದ ಸರದಾರರನ್ನು, ಸೈನಿಕರನ್ನು ಕಿತ್ತೂರಿಗೆ ಕರೆಸಿಕೊಂಡಳು. ಇದು ಇಂಗ್ಲೀಷರ ಗಮನಕ್ಕೆ ಬಂತು, ಕೆರಳಿದರು.

ಥ್ಯಾಕರೆ 18.10.1824ರಲ್ಲಿ ಸೈನ್ಯ ಸಮೇತರಾಗಿ ಕಿತ್ತೂರಿನ ಮೇಲೆ ದಾಳಿಗೆ ಬಂದ. ಆದರೆ ಕೋಟೆಯ ಬಾಗಿಲನ್ನು ಭದ್ರಪಡಿಸಲಾಗಿತ್ತು. ಕೋಟೆಯೊಳಗೆ ಸೈನ್ಯ ಯುದ್ಧಕ್ಕೆ ಸಜ್ಜಾಗಿ ನಿಂತಿತ್ತು. ಕೋಟೆಯ ಬಾಗಿಲಿಗೆ ಎರಡು ಫಿರಂಗಿಗಳನ್ನು ಗುರಿಯಾಗಿ ಇರಿಸಿದ್ದ ಬ್ರಿಟಿಷ್ ಸೇನಾಧಿಕಾರಿಗಳು ಇಪ್ಪತ್ತು ನಿಮಿಷಗಳೊಳಗೆ ಬಾಗಿಲನ್ನು ತೆರೆಯದಿದ್ದರೆ ಹುಡಿ ಮಾಡುವುದಾಗಿ ತಿಳಿಸಿದರು. ಚೆನ್ನಮ್ಮ ಹೆದರಲಿಲ್ಲ. ಯುದ್ಧ ಮೊದಲಾಯಿತು. ಗುರು ಸಿದ್ಧಪ್ಪನ ಮುಂದಾಳತ್ವದಲ್ಲಿ ಕಿತ್ತೂರು ಸೈನ್ಯ ಬ್ರಿಟಿಷ್ ಸೈನ್ಯದ ಮೇಲೆ ಬಿದ್ದಿತು. ಕತ್ತಿಯನ್ನು ಹಿಡಿದ ಯೋಧ ಚೆನ್ನಮ್ಮ ಕುದುರೆಯನ್ನೇರಿ ತನ್ನ ಸೈನಿಕರನ್ನು ಹುರಿದುಂಬಿಸಿದರು. ಕಾಳಗ ರಭಸದಿಂದ ಮುಂದುವರಿಯಿತು. ಬ್ರಿಟಿಷ್ ಸೈನ್ಯದ ಹಲವರು ಸತ್ತರು. ಹಲವರು ಸೆರೆಯಾದರು. ಚೆನ್ನಮ್ಮನ ಮೈಗಾವಲ ಭಟ ಅಮಟೂರ ಬಾಳಪ್ಪ ಥ್ಯಾಕರೆಯನ್ನು ಗುಂಡಿಟ್ಟು ಕೊಂದ. ಬ್ರಿಟಿಷ್ ಸೈನ್ಯ ಸೋಲನ್ನು ಒಪ್ಪಿಕೊಂಡಿತು.

ಸೆರೆ ಸಿಕ್ಕ ಬ್ರಿಟಿಷರಲ್ಲಿ ಸ್ಟೀವನ್ ಸನ್, ಇಲಿಯಟ್ ಮುಖ್ಯರು. ಅವರೊಂದಿಗೆ ಹಲವು ಮಕ್ಕಳು ಇದ್ದರು. ಚೆನ್ನಮ್ಮ ಸೆರೆಸಿಕ್ಕ ಮಕ್ಕಳನ್ನು ತುಂಬ ಎಚ್ಚರಿಕೆಯಿಂದ ನೋಡಿಕೊಂಡಳು. ಚೆನ್ನಮ್ಮ ವಿಜಯಿಯಾದಳು.

ತಮ್ಮ ಬ್ರಿಟಿಷ್ ಸೈನ್ಯದ ಸೋಲಿನ ಸುದ್ದಿ ಕೇಳಿದಂತೆ ಚಾಪ್ಲಿನ್ ಮತ್ತು ಲೆ. ಕ. ಟೀಕನ್ ದೊಡ್ಡ ಸೈನ್ಯದೊಡನೆ 8.11.1824ರಂದು ನುಗ್ಗಿದರು. ಯುದ್ಧವನ್ನು ತಪ್ಪಿಸಲು ಚೆನ್ನಮ್ಮ ಕಿತ್ತೂರಿನ ಪರಿಸ್ಥಿತಿಯನ್ನು ವಿವರಿಸಿ ಗವರ್ನರ್ ಹಾಗೂ ಕಮಿಶನರ್ ಅವರಿಗೆ ಬರೆದ ಪತ್ರ ವ್ಯರ್ಥವೆನಿಸಿತು. ಕಿತ್ತೂರಿನ ಮೇಲೆ ದಾಳಿ ತೀವ್ರವಾಯಿತು. ಚಾಪ್ಲಿನ್ ಕಿತ್ತೂರಿನ ಸೆರೆಯಾಳುಗಳಾಗಿದ್ದ ತಮ್ಮವರನ್ನು ಬಿಡಿಸಲು ಯತ್ನಿಸಿದ. ಚೆನ್ನಮ್ಮನಾಗ, ಕಿತ್ತೂರಿನ ಆಡಳಿತದಲ್ಲಿ ಆಂಗ್ಲರು ಪ್ರವೇಶಿಸುವುದಿಲ್ಲ ಎಂದು ಭರವಸೆ ಕೊಡುವವರೆಗೂ ಬಂಧಿಗಳ ಬಿಡುಗಡೆ ಇಲ್ಲ ಎಂದು ಸ್ಪಷ್ಟವಾಗಿ ತಿಳಿಸಿದಳು. ಚಾಪ್ಲಿನ್‌ನ ಯಾವ ಬೆದರಿಕೆಗೂ ಹೆದರಲಿಲ್ಲ. ಎರಡೂ ಕಡೆ ಯುದ್ಧದ ಸಿದ್ಧತೆ ಬಿರುಸಾಯಿತು. ಚೆನ್ನಮ್ಮ ತನ್ನ ಬೆಂಬಲಿಗರೊಂದಿಗೆ ಯುದ್ಧಕ್ಕೆ ಸಿದ್ಧಳಾದಳು. ಬ್ರಿಟಿಷರಿಗೆ ಶರಣಾಗುವುದು ಅವಮಾನ ಎಂದುಕೊಂಡಳು. ಕೊನೆಯ ಉಸಿರಿನ ತನಕವೂ ಹೋರಾಡಲು ನಿರ್ಧರಿಸಿದಳು. ಚಾಪ್ಲಿನ್‌ನ ಬೆದರಿಕೆಗೆ ಬಗ್ಗದೇ ಯುದ್ಧಕ್ಕೆ ಸಿದ್ಧಳಾದಳು. ಆದರೆ ಚೆನ್ನಮ್ಮನ ನಿರೀಕ್ಷೆಗೆ ವಿರುದ್ಧವಾಗಿ ಕೋಟೆಯೊಳಗೇ ಹಲವು ಸ್ವದ್ರೋಹಿಗಳಿದ್ದರು. ಪಿತೂರಿ ನಡೆಸಿದ್ದರು.

ದೊಡ್ಡ ಸೈನ್ಯವು ಫಿರಂಗಿ ದಳ, ಅಶ್ವದಳ, ಮದರಾಸಿನ ಸಿಪಾಯಿಗಳು ಮುಂಬೈನ ಸೈನಿಕರನ್ನೊಳಗೊಂಡಿತ್ತು. ಚೆನ್ನಮ್ಮನಿಗೂ ಹೋರಾಟವು ಸುಲಭದಲ್ಲಿಲ್ಲವೆಂಬ ಅರಿವಿತ್ತು. ಚೆನ್ನಮ್ಮನ ಸ್ವಾತಂತ್ರ್ಯ ಪ್ರೇಮ. ಅವಳ ಸೈನಿಕರ ಸ್ವಾಮಿಭಕ್ತಿ ಅವಳ ಧೈರ್ಯಕ್ಕೆ ಬೆಂಗಾವಲಾಗಿತ್ತು. ಈ ನಡುವೆ ಚೆನ್ನಮ್ಮ ಮತ್ತು ಬ್ರಿಟಿಷರ ನಡುವೆ ಪತ್ರವ್ಯವಹಾರ ನಡೆಯುತ್ತಲೇ ಇತ್ತು. ಬ್ರಿಟಿಷರು ಬಂಧನದಲ್ಲಿದ್ದ ತಮ್ಮವರನ್ನು ಬಂಧಿಸುವಲ್ಲಿ ಮಾತ್ರ ಕ್ರಿಯಾಶೀಲರಾಗಿದ್ದರು. ಚೆನ್ನಮ್ಮನ ಬೇಡಿಕೆಗಳನ್ನೆಲ್ಲ ತಿರಸ್ಕರಿಸಿದರು. ಖೈದಿಗಳನ್ನು ಬಿಡುಗಡೆ ಮಾಡಲು ಒತ್ತಾಯಿಸುತ್ತಲೇ ಇದ್ದರು. ಚೆನ್ನಮ್ಮ ಕಿತ್ತೂರಿನಿಂದ ಬ್ರಿಟಿಷ್ ಸೈನ್ಯ ದೂರ ಸರಿದರೆ ಬಂಧಿಗಳನ್ನು ಬಿಡುಗಡೆ ಮಾಡುವುದಾಗಿ ತಿಳಿಸಿದಳು. ಬ್ರಿಟಿಷರು, ತಮ್ಮವರನ್ನು ಬಿಡುಗಡೆ ಮಾಡಿದರೆ ಯುದ್ಧ ಪ್ರಾರಂಭಿಸುವುದಿಲ್ಲವೆಂದು ಭರವಸೆ ನೀಡಿದರು. ಚೆನ್ನಮ್ಮ ಯುದ್ಧದಿಂದ ಅಮಾಯಕರ ಸಾವು ಮಾತ್ರ ಎಂದೆಣಿಸಿ ಖೈದಿಗಳನ್ನು ಬಿಟ್ಟಳು. ಬ್ರಿಟಿಷರ ಕುಟಿಲ ನೀತಿಯ ಅರಿವು ಚೆನ್ನಮ್ಮನಿಗೆ ಇರಲಿಲ್ಲ. ತಮ್ಮವರು ತಮ್ಮಲ್ಲಿಗೆ ಬಂದಂತೆ ಚಾಪ್ಲಿನ್ ಚೆನ್ನಮ್ಮನಿಗೆ ತಕ್ಷಣ ಕೋಟೆ ತೆರವು ಮಾಡದಿದ್ದರೆ ಯುದ್ಧ ನಿಶ್ಚಿತ ಎಂದ. ಚೆನ್ನಮ್ಮ ಧೀರೋದಾತ್ತ ಮುತ್ಸದ್ದಿತನ ತೋರಿ, 'ನನಗೆ ಯುದ್ಧ ಬೇಡ, ಅಮಾಯಕರ ರಕ್ತಪಾತ ಬೇಕಿಲ್ಲ. ನೀವು ದುಡುಕುತನ ತೋರುತ್ತಿರುವಿರಿ. ನಮ್ಮ ಸ್ನೇಹಭಾವ ಅರಿತೂ ಅರಿಯದಂತಿರುವಿರಿ. ನಿಮ್ಮನ್ನು ಎದುರಿಸುವ ಯುದ್ಧಕ್ಕೆ ನಾವು ಸಿದ್ಧ' ಎಂದಳು. ಪತ್ರ ವ್ಯವಹಾರ ಸುಮಾರು ಒಂದು ತಿಂಗಳು ಮುಂದುವರಿಯಿತು. ಈ ಅವಧಿಯಲ್ಲೇ ಬ್ರಿಟಿಷರು ತಮ್ಮ ಕಾರ್ಯಾಚರಣೆ ತೀವ್ರಗೊಳಿಸಿದರು.

ಬ್ರಿಟಿಷರಿಗೆ ಕಿತ್ತೂರು ಸ್ವತಂತ್ರ ಸಂಸ್ಥಾನ ಎಂದಿರುವುದು ಬೇಕಿರಲಿಲ್ಲ. ಯುದ್ಧ ಬಿರುಸಾಯಿತು. ನವೆಂಬರ್ 30ರಂದು ಪ್ರಾರಂಭವಾಗಿ ಡಿ. 3ರಂದು ತೀವ್ರವಾಯಿತು. ಕಿತ್ತೂರಿನ ಸೈನಿಕರೊಡನೆ ಚೆನ್ನಮ್ಮ ವೀರಾವೇಶದಿಂದ ಹೋರಾಡಿದಳು. ಬ್ರಿಟಿಷರ ಫಿರಂಗಿಗಳು ಕಿತ್ತೂರ ಕೋಟೆಯ ಭಾಗಗಳನ್ನು ಕೆಡವಿದವು. ಕೋಟೆಯೊಳಗೆ ವಿದ್ರೋಹ ನಡೆಯಿತು ಮದ್ದಿನ ಮನೆಯಲ್ಲೇ ಮೋಸ. ಕಿತ್ತೂರಿಗೆ ಸೋಲು ಖಚಿತವಾಯಿತು. ಚೆನ್ನಮ್ಮ ಶತ್ರುಗಳ ಕೈಗೆ ಸಿಗಬಾರದೆಂದು ಕೋಟೆಯ ಕಿರುಗಿಂಡಿಯಿಂದ ಪಾರಾಗಿ ಸಂಗೊಳ್ಳಿಯ ಮಾರ್ಗವಾಗಿ ಪಾರಾಗಲು ಮುಂದುವರಿದಂತೆ ಬ್ರಿಟಿಷರ ಬಂಧಿಯಾದಳು. ಬ್ರಿಟಿಷರು ಚೆನ್ನಮ್ಮನನ್ನು ಬೈಲಹೊಂಗಲದಲ್ಲಿ ಸೆರೆಯಲ್ಲಿಟ್ಟರು. ಚೆನ್ನಮ್ಮ ಸುಮಾರು ಆರು ವರ್ಷಗಳ ಕಾಲ ಬಂಧಿಯಾಗಿದ್ದಳು. ಆ ಸಮಯದಲ್ಲಿ ಸಂಗೊಳ್ಳಿ ರಾಯಣ್ಣ, ಬಿಚ್ಚುಗತ್ತಿ ಚೆನ್ನಬಸಪ್ಪ, ಗಜವೀರ, ಬಾಲಣ್ಣ ಮೊದಲಾದವರು ಚೆನ್ನಮ್ಮನೊಡನೆ ಸಂಪರ್ಕದಲ್ಲಿದ್ದರು. ಅಲ್ಲಲ್ಲಿ ಬ್ರಿಟಿಷರ ವಿರುದ್ಧ ದಂಗೆಯೆಬ್ಬಿಸಿದರು. ಸಂಗೊಳ್ಳಿ ರಾಯಣ್ಣನನ್ನು ಬ್ರಿಟಿಷರು ಸೆರೆಹಿಡಿದು ಗಲ್ಲಿಗೇರಿಸಿದರು. ಬ್ರಿಟಿಷರಿಂದ ತನ್ನ ನಾಡನ್ನು ಸ್ವತಂತ್ರಗೊಳಿಸುವ ಚೆನ್ನಮ್ಮನ ಆಸೆ, ಕನಸು ಒಡೆದು ಹತಾಶಳಾದಳು. 1830ರ ಫೆಬ್ರವರಿ 30ರಂದು ಸೆರೆಮನೆಯಲ್ಲೇ ಮೃತಳಾದಳು. ಚೆನ್ನಮ್ಮ ತನ್ನ ಕಿತ್ತೂರು ಸಂಸ್ಥಾನದ ಸ್ವಾತಂತ್ರ್ಯವನ್ನು ಉಳಿಸಲು ನಡೆಸಿದ ಹೋರಾಟ ಜನಮನದಲ್ಲಿ ಅಚ್ಚಳಿಯದೆ ಉಳಿದಿದೆ. ಬಗೆಬಗೆಯಲ್ಲಿ ಲಾವಣಿ, ಹಾಡು, ಚೆನ್ನಮ್ಮನ ಕಥೆ ವೀರಗಾಥೆಯಾಗಿ ಕರುನಾಡಿನುದ್ದಗಲ ಇಂದಿಗೂ ಪ್ರಚಲಿತ. ಬ್ರಿಟಿಷರ ವಿರುದ್ಧ ಯುದ್ಧಕ್ಕೆ ಮುಂದಾಗಿ, ಅವರನ್ನು ನಮ್ಮ ದೇಶದಿಂದ ಹೊರಗೋಡಿಸಲು ನಡೆದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವೇ ಕಿತ್ತೂರ ಚೆನ್ನಮ್ಮ ನಡೆಸಿದ ಹೋರಾಟ. ಸದಾ ಮನದಲ್ಲಿ ಚೆನ್ನಮ್ಮ ಚಿರವಾಗಿರುವಲ್ಲಿ ಕಾರ್ಯಪ್ರವೃತ್ತ ರಾಗೋಣ. ನಮ್ಮ ದೇಶದ ಮಾರಾಟಕ್ಕೆ ಸಿದ್ಧವಾಗಿರುವ ಒಳಶತ್ರುಗಳ ಹುಟ್ಟಡಗಿಸಲು ಸದಾ ಚೆನ್ನಮ್ಮನನ್ನು ಸ್ಮರಿಸುತ್ತಿರೋಣ. ❍

# ನಿದ್ರಾ ಸಮಯ : ಯಾವುದು ಹಿತ?

✍ ಎಚ್. ಬಿ. ಚಂದ್ರಶೇಖರ್

**ಆಧುನಿಕ ಜೀವನಶೈಲಿಗೆ ತಕ್ಕಂತೆ ನಿದ್ರೆಯ ಸಮಯ ಬದಲಾಗಿದ್ದರೂ ಅದನ್ನು ಸೂಕ್ತವಾಗಿ ನಿರ್ವಹಿಸುವುದು ಒಳಿತು.**

ಸರ್ಕಾರಿ ಪ್ರೌಢಶಾಲೆಯೊಂದಕ್ಕೆ ಇತ್ತೀಚೆಗೆ ಭೇಟಿ ನೀಡಿದ್ದೆ. ಈ ಸಂದರ್ಭದಲ್ಲಿ ಹತ್ತನೇ ತರಗತಿಯಲ್ಲಿ ದೀರ್ಘಕಾಲದಿಂದ ಗೈರು ಹಾಜರಾಗುತ್ತಿದ್ದ ಕೆಲವು ವಿದ್ಯಾರ್ಥಿಗಳೊಂದಿಗೆ ಸಮಾಲೋಚನೆ ನಡೆಸಲಾಯಿತು. ಆಗ ಕುತೂಹಲಕಾರಿ ಅಂಶವೊಂದು ಗಮನಕ್ಕೆ ಬಂದಿತು. ಮೂವರು ವಿದ್ಯಾರ್ಥಿಗಳು ರಾತ್ರಿ ತಡವಾಗಿ ಮಲಗುವ ಕಾರಣದಿಂದ ಬೆಳಿಗ್ಗೆ ತಡವಾಗಿ ಏಳುವುದರಿಂದ ಶಾಲೆ ತಪ್ಪಿಸುತ್ತಿರುವುದಾಗಿ ತಿಳಿಸಿದರು. ಬೆಳಿಗ್ಗೆ 8 ಗಂಟೆಯೊಳಗೆ ಎದ್ದರೂ ದಿನಪೂರ್ತಿ ಒಂದು ರೀತಿಯ ಅನಾರೋಗ್ಯ ತಮ್ಮನ್ನು ಆವರಿಸಿರುವಂತೆ ಅನ್ನಿಸುವುದಾಗಿ ತಿಳಿಸಿದರು.

ಪೋಷಕರು ಕಚೇರಿ ಕೆಲಸ ಮುಗಿಸಿಕೊಂಡು ರಾತ್ರಿ ಮನೆಗೆ ಬಂದು, ಅಡುಗೆ ಸಿದ್ಧಪಡಿಸಿ, ಎಲ್ಲರೂ ಊಟ ಮಾಡುವ ವೇಳೆಗೆ ಹನ್ನೊಂದು ಗಂಟೆ ದಾಟುತ್ತದೆ. ಜೊತೆಗೆ ಮನೆಯವರೆಲ್ಲ ಸೇರಿ ಒಂದಷ್ಟು ಮಾತುಕತೆ ನಡೆಸುವ ವೇಳೆಗೆ ಮಧ್ಯರಾತ್ರಿ 12 ಗಂಟೆ ದಾಟುವುದರಿಂದ ಬೆಳಿಗ್ಗೆ ಬೇಗ ಏಳಲು ಆಗುತ್ತಿಲ್ಲ ಎಂದು ಅಲವತ್ತುಕೊಂಡರು. ಹಿರಿಯರು ರಾತ್ರಿ ತಡವಾಗಿ ಮಲಗಿದರೂ ಅನಿವಾರ್ಯವಾಗಿ ಬೆಳಿಗ್ಗೆ ಬೇಗ ಎದ್ದು ತಮ್ಮ ಕೆಲಸಗಳಿಗೆ ತೆರಳುತ್ತಾರೆ. ಮಕ್ಕಳಿಗೆ ಸಿದ್ಧರಾಗಿ ಶಾಲೆಗೆ ತೆರಳಲು ತಿಳಿಸಿದರೂ ಅವರು ತಡವಾಗಿ ಏಳುವ ಕಾರಣದಿಂದ ಸಮಯಕ್ಕೆ ಸರಿಯಾಗಿ ಸಿದ್ಧರಾಗದೆ ಶಾಲೆ ತಪ್ಪಿಸುವುದನ್ನು ರೂಢಿ ಮಾಡಿಕೊಂಡಿದ್ದಾರೆ. ಈ ಮಕ್ಕಳಿಗೆ ಅವರು ಈಗ ಏಳುತ್ತಿರುವ ಸಮಯಕ್ಕಿಂತ ಅರ್ಧ ಗಂಟೆ ಮುಂಚೆ ಏಳುವ ಅಭ್ಯಾಸ ಮಾಡಿಕೊಳ್ಳುತ್ತಾ ಕ್ರಮೇಣ ಏಳು ಗಂಟೆಯೊಳಗೆ ಏಳುವ ಅಭ್ಯಾಸ ರೂಢಿ ಮಾಡಿಕೊಳ್ಳಲು ತಿಳಿ ಹೇಳಿದ.

ಆಧುನಿಕ ಜೀವನಶೈಲಿ ಎಂದರೆ ರಾತ್ರಿ ತಡವಾಗಿ ಮಲಗಿ, ಬೆಳಿಗ್ಗೆ ನಿಧಾನವಾಗಿ ಏಳುವುದು ಎಂಬಂತಾಗಿದೆ. ಉದ್ಯೋಗ, ಓದು, ಪರೀಕ್ಷೆಗೆ ತಯಾರಿ ಎಂಬಂತಹ ಕಾರಣಗಳು ಇಲ್ಲದಿದ್ದಾಗ್ಯೂ ಮೊಬೈಲ್ ಫೋನ್ ನೋಡುತ್ತಾ ಅಥವಾ ಸಿನಿಮಾ ಅಥವಾ ಧಾರಾವಾಹಿಗಳನ್ನು ನೋಡುತ್ತಾ ಇಂದಿನ ಮಕ್ಕಳು ರಾತ್ರಿ 2-3 ಗಂಟೆಯವರೆಗೆ ಎದ್ದಿರುತ್ತಾರೆ. ಸಹಜವಾಗಿ ಬೆಳಿಗ್ಗೆ 10 ಗಂಟೆಯ ನಂತರ ಅವರ ರೂಮಿನ ಬಾಗಿಲುಗಳು ನಿಧಾನವಾಗಿ ತೆರೆದುಕೊಳ್ಳುತ್ತದೆ. ಈ ಸನ್ನಿವೇಶ ಕೆಲವರ ಮನೆಗಳಲ್ಲಿ ಸಾಮಾನ್ಯ ಎಂಬಂತೆ ಆಗಿದೆ ಎನ್ನಬಹುದು. ಬೆಳಿಗ್ಗೆ ಐದಾರು ಗಂಟೆಗೆ ಎದ್ದು ದಿನನಿತ್ಯದ ಚಟುವಟಿಕೆಗಳಲ್ಲಿ ತೊಡಗುವ ಮನೆಯ ಹಿರಿಯರಿಗೆ ನಿಧಾನವಾಗಿ ನಿದ್ರೆಯಿಂದ ಏಳುವ ಕಿರಿಯರ ಜೊತೆ ತಾಕಲಾಟಗಳು ಆಗಿ, ಕೊನೆಗೆ ಹಿರಿಯರು ಅಸಹಾಯಕತೆ ಯಿಂದ ಸುಮ್ಮನಾಗುತ್ತಾರೆ.

ಬೆಳಿಗ್ಗೆ ಬೇಗ ಎದ್ದು ಕೆಲಸಗಳಲ್ಲಿ ತೊಡಗಿ, ರಾತ್ರಿ ಬೇಗ ಮಲಗುವುದು ಒಳ್ಳೆಯ ಅಭ್ಯಾಸ ಎಂದು ವಿಜ್ಞಾನಿಗಳು, ಆರೋಗ್ಯ ತಜ್ಞರು ಹೇಳುತ್ತಾರೆ. ಸಮಾಜವು ಬೆಳಿಗ್ಗೆ ಬೇಗ ಏಳುವವರಿಗೆ ಸೂಕ್ತವಾಗುವಂತೆ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿದೆ. ತುರ್ತು ಕೆಲಸಗಳು ಇರುವಾಗ ರಾತ್ರಿ ವೇಳೆ ಸಕ್ರಿಯವಾಗಿ ಇರುವವರಿಗೆ ಬೆಳಿಗ್ಗೆ ಬೇಗ ಎದ್ದು ಸಿದ್ಧವಾಗುವುದು ಕಷ್ಟವಾಗುತ್ತದೆ. ಬೆಳಿಗ್ಗೆ ಬೇಗ ಎದ್ದಾಗ ಶಕ್ತಿ, ಉತ್ಸಾಹ ಕಡಿಮೆಯಾದಂತೆ ಅನ್ನಿಸಿ, ಮೂಡ್ ಇಲ್ಲದಂತೆ ಆಗುವ ಸಾಧ್ಯತೆ ಇರುತ್ತದೆ. ನಿದ್ರೆಯ ಲಯ ತಪ್ಪಿದರೆ ದೇಹದ ಜೈವಿಕ ಗಡಿಯಾರವನ್ನು ಸರಿಪಡಿಸಿಕೊಳ್ಳಲು ಹೆಚ್ಚಿನ ಶ್ರಮವಹಿಸಬೇಕಾಗುತ್ತದೆ.

ಇಂತಹ ಅಭ್ಯಾಸಗಳಲ್ಲಿ ವ್ಯಕ್ತಿಗಳ ನಡುವೆ ವ್ಯತ್ಯಾಸ ಇರುತ್ತದೆ. ಕೆಲವರಿಗೆ ಬೆಳಿಗ್ಗೆ ಬೇಗ ಎದ್ದು ಕೆಲಸದಲ್ಲಿ ತೊಡಗುವುದು ಉತ್ಸಾಹ, ಹಿತಕರ ಎನಿಸಿದರೆ ಅವರು ಮುಂಜಾವಿನವರು. ಇನ್ನು ಕೆಲವರಿಗೆ ಸಂಜೆ, ರಾತ್ರಿ ವೇಳೆ ಕೆಲಸದಲ್ಲಿ ತೊಡಗುವುದು ಖುಷಿ ಕೊಡುತ್ತದೆ. ಈ ವ್ಯತ್ಯಾಸವನ್ನು ಅರ್ಥ ಮಾಡಿಕೊಂಡು, ಅದನ್ನು ಗೌರವಿಸುವ ಅಗತ್ಯ ಇದೆ. ಪ್ರಕೃತಿ ಸಹಜ ಸ್ವಭಾವಗಳನ್ನು ಬದಲಿಸಿಕೊಳ್ಳುವುದು ಕಠಿಣವಾಗುತ್ತದೆ. ಬೆಳಿಗ್ಗೆ ಬೇಗ ಏಳುವವರು ಹೆಚ್ಚು ಕ್ರಿಯಾಶೀಲರು, ಸೃಜನಶೀಲರು ಮತ್ತು ಆರೋಗ್ಯವಂತರು ಆಗಿರುತ್ತಾರೆ ಎಂಬ ಭಾವನೆ ಸಹಜವಾಗಿ ಇದೆ. ಅದಾಗ್ಯೂ ಸಮೀಕ್ಷೆಗಳಲ್ಲಿ ಕಂಡುಕೊಂಡಂತೆ, ರಾತ್ರಿ ಸಕ್ರಿಯವಾಗಿ ಇರುವವರು ಆದಾಯ ಗಳಿಕೆಯಲ್ಲಿ ಬೆಳಿಗ್ಗೆ ಸಕ್ರಿಯವಾಗಿ ಇರುವವರಿಗಿಂತ ಮುಂದಿದ್ದಾರೆ ಎನ್ನಲಾಗಿದೆ. ಎರಡೂ ರೀತಿಯ ವ್ಯಕ್ತಿಗಳಲ್ಲಿ ಕೆಲವು ಅಂಶಗಳು ಉತ್ತಮವಾಗಿ ಇರುವಂತೆ ಕಾಣುತ್ತದೆ.

ಅಂತಿಮವಾಗಿ ಶಿಕ್ಷಣ, ವೃತ್ತಿ, ಕುಟುಂಬ ಜೀವನವನ್ನು ಯಶಸ್ವಿಯಾಗಿ ನಿಭಾಯಿಸುವುದೇ ಮುಖ್ಯ ಅಂಶವಾಗುತ್ತದೆ. ಈ ದಿಸೆಯಲ್ಲಿ ವ್ಯಕ್ತಿ ಯಶಸ್ವಿಯಾದರೆ ಯಾವುದೇ ಹಾನಿ ಇರದು. ಜವಾಬ್ದಾರಿಗಳು ಹೆಚ್ಚಾದಂತೆ ವ್ಯಕ್ತಿಯು ರಾತ್ರಿ ವೇಳೆಯ ಸಕ್ರಿಯ ಜೀವನಶೈಲಿಯನ್ನು ಅಗತ್ಯಕ್ಕೆ ತಕ್ಕಂತೆ ಬದಲಿಸಿಕೊಂಡು ನಿರ್ವಹಿಸುವ ಉದಾಹರಣೆಗಳನ್ನು ಕಾಣುತ್ತೇವೆ. ಆದರೆ ವಿದ್ಯಾರ್ಥಿ ದೆಸೆಯಿಂದಲೇ ರಾತ್ರಿ ಬಹು ಹೊತ್ತಿನವರೆಗೆ ಸಕ್ರಿಯವಾಗಿದ್ದು ಮುಂಜಾನೆಯ ಶೈಕ್ಷಣಿಕ ಚಟುವಟಿಕೆಗಳನ್ನು ನಿರ್ವಹಿಸಲು ಸಮಸ್ಯೆ ಆಗದಂತೆ ಎಚ್ಚರ ವಹಿಸುವತ್ತ ಅವರನ್ನು ಸಜ್ಜುಗೊಳಿಸುವುದು ಮುಖ್ಯವಾಗಿದೆ. ಇದರ ಜೊತೆಗೆ ಪ್ರತಿಯೊಬ್ಬರೂ ಸೂಕ್ತ ನಿದ್ರೆಯ ಅಗತ್ಯವನ್ನು ಮನಗಂಡು ಅದನ್ನು ಹೊಂದುವತ್ತ ಗಮನಹರಿಸಬೇಕಿದೆ. ❍

# ನೆನಪಿನಂಗಳದಲ್ಲಿ ಶಿಮುಂಜೆ

ಡಾ. ಪೂರ್ಣಿಮಾ ಸುಧಾಕರ ಶೆಟ್ಟಿ

ಕವಿಯಾಗಿ, ಲೇಖಕರಾಗಿ, ಅನುವಾದಕರಾಗಿ, ನಟರಾಗಿ, ಉದ್ಘೋಷಕರಾಗಿ, ಸಂಘಟಕರಾಗಿ ಎಲ್ಲಕ್ಕಿಂತ ಹೆಚ್ಚು ಸ್ನೇಹಸೇತುವಾಗಿ ಭಿನ್ನ ನೆಲೆಗಳಲ್ಲಿ ಗುರುತಿಸಿಕೊಂಡು ಮುಂಬಯಿಯ ಕನ್ನಡಿಗರ ಆಸ್ತಿಯಾಗಿದ್ದ ಶಿಮುಂಜೆ ಪರಾರಿ ಅವರು ಸೆಪ್ಟೆಂಬರ್ 14, 2024ರಂದು ಸ್ವರ್ಗಸ್ಥರಾಗಿದ್ದಾರೆ. ಶಿಮುಂಜೆಯವರಿಗೊಂದು ಹೃದಯಾಂತರಾಳದ ನುಡಿ ನಮನ.

ಬೆಳಗಬೇಕು ಬೆಳಕಾಗಬೇಕಯ್ಯ ನೀವು
ನಿಮ್ಮ ಸುತ್ತ ನಿಂತವರೆಲ್ಲ ಎದ್ದು ಕಾಣುವರಯ್ಯಾ
ಬೆಳಕ ನಂದಿಸಿ ನೀವು ಕತ್ತಲಾದಾಗ
ಇದ್ದವರೂ ಕಾಣದಂತಾಗುವರಯ್ಯಾ
ಗುರು ನಿತ್ಯಾನಂದ

ಒಂದು ದೀಪದಿಂದ ಮತ್ತೊಂದು ದೀಪ ಬೆಳಗುವಂತೆ ಪೂರ್ಣತೆಯ ಕಡೆಗೆ ನಮ್ಮ ಬದುಕು ಸಾಗಬೇಕು. ಸಂಸಾರವೆಂಬ ಸಾಗರದಲ್ಲಿ ಬರುವ ಸುಖ -ದುಃಖ, ಏರುಪೇರುಗಳನ್ನು ಎದುರಿಸಿ ಮುನ್ನಡೆದರೆ ಮಾತ್ರ ಬದುಕು ಸುಗಮವಾಗುವುದು. ತಮ್ಮ ಸರಳ, ಸುಂದರ, ಮನೋಹರವಾದ ಮುಕ್ತಕಗಳ ಮೂಲಕ ಓದುಗರ ಮನಸೆಳೆದ ಸಾಹಿತ್ಯ ಲೋಕದ ತಾರೆ ಶಿಮುಂಜೆ ಪರಾರಿ ಎಂಬ ಬೆಳಕು ನಂದಿಹೋಗಿದೆ.

'ಶರಣರ ಗುಣವನ್ನು ಮರಣದಲ್ಲಿ ಕಾಣು' ಎಂಬಂತೆ ಕಾಯ ಅಳಿದರೂ ವ್ಯಕ್ತಿ ಮಾಡಿದ ಒಳ್ಳೆಯ ಕೆಲಸಗಳಿಂದ, ಆತನ ಉತ್ತಮ ಗುಣಗಳಿಂದ, ಸನ್ನಡತೆ, ಸಜ್ಜನಿಕೆಗಳಿಂದ ಆತ ಜನರ ಮನಸ್ಸಿನಲ್ಲಿ ಶಾಶ್ವತವಾಗಿ ಉಳಿಯುತ್ತಾನೆ. ಹೀಗೆ ಸದಾ ನಮ್ಮ ನೆನಪಿನಲ್ಲಿ ಉಳಿಯುವ ವ್ಯಕ್ತಿತ್ವ ಮತ್ತು ವ್ಯಕ್ತಿ ಅಂದರೆ ಅದು ಶಿಮುಂಜೆ ಪರಾರಿ ಎಂದರೆ ತಪ್ಪಾಗಲಾರದು.

ಶಿಮುಂಜೆ ಪರಾರಿ ಎಂದೇ ಪ್ರೀತ್ಯಾದರಗಳಿಂದ ಪರಿಚಿತರಾಗಿರುವ ಸೀತಾರಾಮ ಶೆಟ್ಟಿ ಅವರದು ಬಹುಮುಖ ಪ್ರತಿಭೆ. ಶಾಲಾ ಕಾಲೇಜಿನಲ್ಲಿ ಸೀತಾರಾಮ ಶೆಟ್ಟಿ, ಕಚೇರಿಗಳಲ್ಲಿ ಎಸ್. ಎಂ. ಶೆಟ್ಟಿ, ಸಾಹಿತ್ಯ ವಲಯದಲ್ಲಿ ಶಿಮುಂಜೆ ಪರಾರಿಯೆಂದೇ ಪ್ರೀತಿ, ಗೌರವಕ್ಕೆ ಪಾತ್ರರಾಗಿದ್ದ ಅವರು, ಮುಂಬಯಿ ಸಾಹಿತ್ಯ ವಲಯದ ಸಿರಿವಂತಿಕೆಯನ್ನು ಹೆಚ್ಚಿಸಿದ್ದ ಸಮಕಾಲೀನ ಕನ್ನಡ ಕವಿಗಳಲ್ಲಿ ಮುಖ್ಯರಾಗಿದ್ದರು. ಮೃದು ಸ್ವಭಾವದ, ನಯ ವಿನಯದ ಮಾತು, ಸರಳ ಸೌಜನ್ಯ, ಕಿರಿಯರೊಂದಿಗೆ ತೋರುವ ಆದರ, ಪ್ರೀತಿ, ಅದಕ್ಕೆ ಪ್ರತಿಯಾಗಿ ಅವರಿಗೆ ಜನರು ತೋರುವ ಗೌರವ ಇವೆಲ್ಲವೂ ಅವರ ಬದುಕಿನ ಆಸ್ತಿ. ಅವರು 'ಹಿತಮಿತ ಮೃದು ವಚನಂ' ಎಂಬ ಮಾತಿನಂತೆ ಬದುಕಿದವರು. ಅವರ ತೂಕದ ಮಾತು, ನಿಖರ ಅಭಿವ್ಯಕ್ತಿ ಸೂಸುವ ಬರವಣಿಗೆ, ಸ್ಪಷ್ಟ ನಿಲುವು ಎಲ್ಲವೂ ನಮಗೆ ಮಾದರಿಯೇ ಸರಿ.

ಶಿಮುಂಜೆ ಅವರೊಳಗಿದ್ದ ಸೃಜನಶೀಲತೆ, ಕವಿ ಮನಸ್ಸು ಅವರು ರಚಿಸಿದ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ನಲಿದಾಡುತ್ತದೆ. ಅವರು ಭಾಷಾ ಪ್ರೇಮಿ, ಕನ್ನಡ, ತುಳು, ಮರಾಠಿ, ಹಿಂದಿ, ಗುಜರಾತಿ ಮೊದಲಾದ ಭಾಷೆಗಳಲ್ಲಿ ನಿರರ್ಗಳ ವ್ಯವಹಾರ ಮಾಡುತ್ತಿದ್ದ ಶಿಮುಂಜೆಯವರು ಹಿಂದಿ, ಮರಾಠಿ, ಗುಜರಾತಿಯ ಶ್ರೇಷ್ಠ ಕಥೆ, ನಾಟಕ, ಲೇಖನಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಬೇರೆ ಬೇರೆ ಭಾಷೆಗಳನ್ನಾಡುವ ವಿವಿಧ ಸಂಸ್ಕೃತಿಗಳಿಂದ ಬಂದ, ಭಿನ್ನ ಆಚಾರಗಳನ್ನೊಳಗೊಂಡ ಜನರ ಭಾವ ಸಾಮರಸ್ಯವನ್ನು ಸಾಧಿಸಿ ಅವರ ಹೃದಯಗಳಿಗೆ ಸಂಪರ್ಕ ಸೇತುವೆಯಂತೆ ಅನುವಾದ ಕಾರ್ಯದಲ್ಲಿ ಅವರು ತೊಡಗಿಸಿಕೊಂಡಿದ್ದಾರೆ. ತಾನು ಓದಿ ಮೆಚ್ಚಿದ ಅನ್ಯ ಭಾಷಾ ಲೇಖಕರ ಬರಹಗಳನ್ನು ಕನ್ನಡ ಬಾಂಧವರೂ ಓದಿ ಆನಂದಿಸಲೆಂದು ನವಪ್ರಭಾತ, ನಿಯೋಗ, ಹುತಾತ್ಮರು, ಹಣತೆ, ಯಾರು ನನ್ನವರು? ನಾನು, ನೀನು ಮತ್ತು ಮೊದಲಾದ ಕೃತಿಗಳನ್ನು ಅವರು ಬಹಳ ಸೊಗಸಾಗಿ ಅನುವಾದಿಸಿದ್ದಾರೆ. ಯಾರು ನನ್ನವರು? 'ಯಾನ್ ಪಿನಯೆ' ಮೊದಲಾದ ನಾಟಕಗಳನ್ನು ರಂಗದ ಮೇಲೆಯೂ ತಂದು ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರರಾಗಿದ್ದ ಅವರು ಧಾರವಾಹಿ, ಸಿನೆಮಾದಲ್ಲೂ ಮಿಂಚಿದ್ದು ಅವರ ಪ್ರತಿಭೆಗೆ ಹಿಡಿದ ಕನ್ನಡಿ. ರಾಷ್ಟ್ರೀಯ ಪುರಸ್ಕಾರ ಗಳಿಸಿದ 'ಘಟಶ್ರಾದ್ಧ' ಸಿನೆಮಾ ಐತಿಹಾಸಿಕ ದಾಖಲೆಯನ್ನು ನಿರ್ಮಿಸಿತ್ತು. ಅದರ ನಿರ್ಮಾಪಕರಾದ ಸದಾನಂದ ಸುವರ್ಣ ಅವರು ನಮ್ಮನ್ನು ಅಗಲಿದ ಕೆಲವೇ ಸಮಯದಲ್ಲಿ ಶಿಮುಂಜೆಯವರ ಇಹಲೋಕ ಯಾತ್ರೆ ಅತ್ಯಂತ ದುಃಖಕರ ಸಂಗತಿ.

ಸಾಹಿತ್ಯ, ಕಲೆ, ಮಾನವ ಜೀವನವನ್ನು ಉಜ್ವಲಗೊಳಿಸುವ ಕೆಲಸ ಮಾಡಬೇಕು. ತಾನು ರಚಿಸಿದ ಸಾಹಿತ್ಯ ತನಗೆ ತೃಪ್ತಿ ಆಗದಿದ್ದರೆ ಜನಸಾಮಾನ್ಯನಿಗೆ ತಲುಪಲು ಸಾಧ್ಯವೇ ಇಲ್ಲ ಎಂದು ನಂಬಿದ್ದ ಶಿಮುಂಜೆ ಅವರು ತನಗೆ

ಇಷ್ಟವಾದ 'ಯಾನ್ ಪನ್ಪಿನಿ ಇಂಚ' ಸಾವಿರ ತುಳು ಚುಟುಕುಗಳನ್ನು ಬರೆದು ಹತ್ತು ಸಂಪುಟಗಳಲ್ಲಿ ಕಿರು ಹೊತ್ತಗೆಗಳಾಗಿ ಮುದ್ರಿಸಿ ಮುಂಬಯಿಯ ಜಾತೀಯ ಸಂಸ್ಥೆಗಳ ಮೂಲಕ ತುಳು ಬಾಂಧವರಿಗೆ ಧರ್ಮಾರ್ಥವಾಗಿ ಹಂಚುವ ವಿಶಿಷ್ಟವಾದ ಯೋಜನೆಯನ್ನು ಹಾಕಿದರು. ಅತ್ತಿಮಬ್ಬೆ ರನ್ನನ ಶಾಂತಿಪುರಾಣದ ಸಾವಿರ ಪ್ರತಿಗಳನ್ನು ಬರೆಯಿಸಿ ಹಂಚಿದಂತೆ ಶಿಮುಂಜೆ ಅವರು ಸಾವಿರ ಚುಟುಕುಗಳನ್ನು ಬರೆದು ಮನೆ, ಮನಗಳಿಗೆ ತಲುಪಿಸಿದರು. ಬಹುಶಃ ಇದು ಪುಸ್ತಕ ಪ್ರಕಟಣೆಯ ಇತಿಹಾಸದಲ್ಲಿಯೇ ಅಭಿಮಾನ ಪಡುವ ಕಾರ್ಯ ಎಂದರೂ ಅತಿಶಯೋಕ್ತಿ ಯಾಗಲಾರದು. ತುಳು ಸಾಹಿತ್ಯವನ್ನು ಜೀವಂತವಾಗಿರಿಸಲು ಅವರು ಪ್ರಾಂಜಲ ಮನಸ್ಸಿನಿಂದ ಸಾಹಿತ್ಯಿಕ ಪರಿಚಾರಿಕೆಯನ್ನು ನಡೆಸಿಕೊಂಡು ಬಂದಿದ್ದನ್ನು ಮರೆಯುವಂತಿಲ್ಲ. ನಿತ್ಯಾನಂದ ಸ್ವಾಮಿಯ ಪರಮಭಕ್ತರಾಗಿದ್ದ ಶಿಮುಂಜೆ ಅವರು 'ಗುರು ನಿತ್ಯಾನಂದ' ಎಂಬ ಅಂಕಿತ ನಾಮದಿಂದ ವಚನಗಳನ್ನು ರಚಿಸಿ ಓದುಗರ ಮೆಚ್ಚುಗೆ, ಪ್ರಶಂಸೆಗೆ ಪಾತ್ರರಾಗಿದ್ದಾರೆ. ಅವರ ಬದುಕಿನ ಅನುಭವಗಳೇ ಈ ವಚನಗಳ ಜೀವಾಳ. ಅವು ಓದುಗನ ಮನಸ್ಸಿಗೆ ನಾಟಿ, ಹೃದಯವನ್ನು ತಟ್ಟಿವೆ. ಅವರ ವಚನಗಳು ಸಮಾಜದ ಆಗುಹೋಗುಗಳ ಬಗ್ಗೆ ಚಿಂತನ ಮಂಥನ, ಬದುಕಿನ ತಿಳಿರಹಸ್ಯಗಳು, ಬದುಕಿಗೆ ಸಂಗತವಾಗುವ ವಿಷಯುಗಳಿಂದ ತುಂಬಿದ ಅಮೃತಧಾರೆಗಳಾಗಿವೆ. ಸ್ವಚ್ಛಂದ ಛಂದದಿಂದ, ಮನಸ್ಸಿನ ನಿರ್ಮಲಭಾವದಿಂದ, ಸಹಜ ಸೌಂದರ್ಯದಿಂದ, ಹೆಣೆದ ಅಂದದಿಂದ ಜೀವನಮೌಲ್ಯಗಳನ್ನು ತಿಳಿಸುವ ರಸಧಾರೆಯಾಗಿವೆ.

ಅವರು ಮರಾಠಿಯಿಂದ ಅನುವಾದಿಸಿದ ಜೋಕುಲು ಬಾಲೆಲು ನಾಟಕಕ್ಕೆ ತುಳು ಅಕಾಡೆಮಿ ಪುಸ್ತಕ ಪ್ರಶಸ್ತಿ , ಮರಾಠಿ-ಕನ್ನಡ ಸ್ನೇಹಸೇತುವಾಗಿದ್ದ ಅವರಿಗೆ ಮುಂಬಯಿ ಕರ್ನಾಟಕ ಸಂಘ ಕೊಡಮಾಡುವ ಪ್ರತಿಷ್ಠಿತ 'ವರದರಾಜ ಆದ್ಯ ಪ್ರಶಸ್ತಿ' ಗಳಲ್ಲದೆ ಬೇರೆ ಬೇರೆ ಸಂಘ ಸಂಸ್ಥೆಗಳಿಂದ ಗೌರವ, ಸನ್ಮಾನಗಳು ಅವರ ಮುಡಿಗೇರಿದ್ದವು. ಇಷ್ಟಾದರೂ ಇಂದಿಗೂ ಬೀಗದೆ ಹಿರಿಕಿರಿಯರೊ ಬದುಕಿದ ಅದಮ್ಯ ಚೇತನ ಅವರದು.

ಶಿಮುಂಜೆ ಪರಾರಿ ಅವರ ಸಾಹಿತ್ಯ ಸಾಧನೆಗಳನ್ನು ದಾಖಲಿಸುವ ಪ್ರಯತ್ನವನ್ನು ಮುಂಬಯಿ ವಿಶ್ವವಿದ್ಯಾಲಯ, ಕನ್ನಡ ವಿಭಾಗ ಮಾಡಿದೆ. ಶಿಮುಂಜೆ ಪರಾರಿ ಬದುಕು ಬರಹ (ಎಂ.ಫಿಲ್ ಸಂಪ್ರಬಂಧ), ಸಂಪ್ರೀತಿ (ಶಿಮುಂಜೆ ಅಭಿನಂದನ ಗ್ರಂಥ), ಕನ್ನಡ ವಿಭಾಗ ಪ್ರಮುಖರಾದ ಡಾ. ಜಿ. ಎನ್. ಉಪಾಧ್ಯ ಅವರ ಮಾರ್ಗದರ್ಶನದಲ್ಲಿ ಅಭಿಜಿತ್ ಪ್ರಕಾಶನದಿಂದ ಪ್ರಕಟವಾಗಿವೆ.

ವಿವಿಧ ಪ್ರಕಾರದ ಸಾಹಿತ್ಯ ಕೃಷಿಯಿಂದ ಸಾಹಿತ್ಯ ಲೋಕದ ಶ್ರೀಮಂತಿಕೆಯನ್ನು ಹೆಚ್ಚಿಸಿದ ಶಿಮುಂಜೆ ಪರಾರಿ ಅವರು ಅನಾರೋಗ್ಯದಿಂದ ಕೈಯಲ್ಲಿ ಲೇಖನಿ ಹಿಡಿಯಲಾಗದೆ ಬಹಳ ಸಮಯದಿಂದ ಬರೆಯುವುದನ್ನು ನಿಲ್ಲಿಸಿದ್ದು ಕನ್ನಡ ಸಾಹಿತ್ಯಪ್ರಿಯರಿಗೆ, ಅವರ ಅಭಿಮಾನಿಗಳಿಗೆ ತುಂಬಲಾರದ ನಷ್ಟವಾಗಿತ್ತು.

ಶಿಮುಂಜೆ ಪರಾರಿಯವರು ನಮ್ಮ ನೆನಪಿನಂಗಳದಲ್ಲಿ ನೆನಪಾಗಿರುತ್ತಾರೆ. ತೆರೆದ ಮನಸ್ಸಿನ, ವಿಶಾಲ ಹೃದಯದ, ಗಂಭೀರ ವದನ, ಸ್ನೇಹ ಚಿತ್ತದ, ಮಗುವಿನಂತಹ ಮುಗ್ಧತೆಯ ಕವಿ ಶಿಮುಂಜೆ ಪರಾರಿ ಅವರು ನಮ್ಮೊಂದಿಗಿಲ್ಲವಾದರೂ ಅವರ ಕೃತಿರಾಶಿಗಳ ಮೂಲಕ ಸದಾ ಜೀವಂತವಾಗಿರುತ್ತಾರೆ. ಅವರಿಗೆ ಭಕ್ತಿಯ ನಮನಗಳೊಂದಿಗೆ ಭಾವಪೂರ್ಣ ಅಶ್ರುತರ್ಪಣ. ❍

ಕವನ

# ಬಿಸಿಲೂರ ಚೆಲುವೆಯ ಹಸಿರೂರ ಹೆಬ್ಬಯಕೆ

– ಕಲಾ ಮಾನ್ವಿ

ಬಿಸಿಲೂರ ಚೆಲುವೆಯಿವಳು
ಹಸಿರೂರ ಸೌಂದರ್ಯಕ್ಕೆ ಮನಸೋತಿಹಳು
ಚುಮು ಚುಮು ಚಳಿಗೆ ಬಿಸಿ
ಬಿಸಿ ಕನಸುಗಳ ಹೆಣೆದಿಹಳು...

ಹಸಿರ ಮಲೆನಾಡ ಮಡಿಲಿಗೆ
ಪುಟ್ಟ ಹೃದಯದ ಹೆಬ್ಬಯಕೆ
ಹಗಲಿರುಳೂ ಕಾಡಿದೆ
ಸೃಷ್ಟಿ ವೈಶಿಷ್ಟತೆಯ ಕನವರಿಕೆ...

ಹಸಿರೂರ ತಾಣಕೆ ಹೊರಟಿದೆ
ಒಲವ ಪಯಣದ ಮೆರವಣಿಗೆ
ಮಲೆನಾಡ ಸೊಬಗ ಸಿರಿಗೆ
ಮನವರಳಿದ ಹೂವಾಗಿದೆ...??

❍❍❍

# ಮುಪ್ಪು ಬಂದಿತಲ್ಲ ಪಾಯಸ ತಪ್ಪದೆ ಉಣಲಿಲ್ಲ!

✍ ರತ್ನಾ ಬಡವನಹಳ್ಳಿ

ಕಳೆದ ವಾರದಲ್ಲಿ ತುಂಬಿದ ಮುಂಡಿಗೆಯ ಸಾರ ಮಂಡೆಯಲ್ಲಿ ಅಚ್ಚಾಗುವಾಗ ಮತ್ತೊಂದು ಮುಂಡಿಗೆ ಸರದಿಯಲ್ಲಿ ನಿಂತಿದೆ. ಪುರಂದರ ದಾಸರ ಪ್ರಸಿದ್ಧ ಮುಂಡಿಗೆಗಳಲ್ಲಿ ಒಂದಾದ

ಮಾಡು ಸಿಕ್ಕದಲ್ಲ, ಮಾಡಿನ ಗೂಡು ಸಿಕ್ಕದಲ್ಲ
ಜೋಡು ಹೆಂಡಿರಂಜಿ ಓಡಿ ಹೋಗುವಾಗ
ಗೋಡೆ ಬಿದ್ದು ಬಯಲಾಯಿತಲ್ಲ

ಎಚ್ಚರಗೊಳಲಿಲ್ಲ ಮನವೆ, ಹುಚ್ಚನಾದೆನಲ್ಲ
ಅಚ್ಚಿನೊಳಗೆ ಮೆಚ್ಚು ಮೆಚ್ಚಿನೊಳಗೆ ಅಚ್ಚು
ಕಿಚ್ಚೆದ್ದು ಹೋಯಿತಲ್ಲ॥

ಮುಪ್ಪು ಬಂದಿತಲ್ಲ ಪಾಯಸ ತಪ್ಪದೆ ಉಣಲಿಲ್ಲ।
ತುಪ್ಪದ ಬಿಂದಿಗೆ ತಿಪ್ಪೆ ಮೇಲೆ ಧೊಪ್ಪನೆ ಬಿತ್ತಲ್ಲ॥

ಯೋಗವು ಬಂದಿತಲ್ಲ, ಬದುಕು ವಿಘಾತವಾಯಿತಲ್ಲ
ಭೋಗಿಶಯನ ಶ್ರೀ ಪುರಂದರವಿಠಲನ ಆಗ ನೆನೆಯಲಿಲ್ಲ॥

ಮಾಡು ಎಂದರೆ ಭಕ್ತಿ. ಈ ಸಂಸಾರದಲ್ಲಿ ಭಕ್ತಿ ಸಾಧ್ಯವಿಲ್ಲ. ಅದು ಸಿಗುತ್ತಿಲ್ಲ. ಆದ್ದರಿಂದಲೇ ಮಾಡಿನ ಗೂಡು ಎಂದರೆ ಭಗವಂತನ ಸನ್ನಿಧಾನ. ಅದು ನಮಗೆ ಸಿಗುವುದಿಲ್ಲ. ಹೋಗುವ ಮಾರ್ಗದಲ್ಲಿ ಲಭಿಸುವ ಶಾಂತಿ ಭಕ್ತಿಯಿಂದ ಮಾತ್ರ ಗಮ್ಯನಾದ ಭಗವಂತನೇ ಮಾಡಿನ ಗೂಡು, ಮಾಡು ಎಂದರೆ ಅಟ್ಟ ಇದನ್ನು ವೈಕುಂಠವೆಂದೂ ಪರಿಗಣಿಸಿದ್ದಾರೆ. ಸತ್ಕರ್ಮಾನುಷ್ಠಾನಕ್ಕೆ ಅನುಕೂಲಕರವೆಂದು ಭಾರತದ ತೀರ್ಥಕ್ಷೇತ್ರಗಳು, ಸಜ್ಜನ ಸಹವಾಸ. ಇವುಗಳೇ ಮಾಡಿನ ಗೂಡು. ಇವು ದರ್ಶನಕ್ಕೆ ಲಭ್ಯವಾದರೂ ಮನಸ್ಸಿನ ಮುಕ್ತಿ ಮಾರ್ಗಕ್ಕೆ ನಿಲುಕಿಲ್ಲ. ಈ ಸ್ಥೂಲ ದೇಹದಲ್ಲಿರುವ ಬುದ್ಧಿ ಹಾಗೂ ಮನಸ್ಸುಗಳು ಹೊರಮುಖವಾದ ವ್ಯಾಪಾರದಲ್ಲಿ ಮುಳುಗಿವೆಯೇ ಹೊರತು ಅಂತರ್ಮುಖಿಗಳಾಗಿಲ್ಲ. ನೂರಾರು ತೀರ್ಥಕ್ಷೇತ್ರಗಳನ್ನು ಸುತ್ತಿದರೂ ಕೇವಲ ದೃಷ್ಟಿಗಷ್ಟೇ ಆಯ್ತು. ಅದಕ್ಕಾಗಿ ಮಾಡು ಸಿಕ್ಕದಲ್ಲ, ನಮಗೆ ಗೂಡು ಸಿಕ್ಕದಲ್ಲ ಎಂದಿದ್ದಾರೆ ದಾಸರು.

ನಮ್ಮ ದೇಹದ ತತ್ವಾಭಿಮಾನಿಗಳಲ್ಲಿ ಉಮಾ ದೇವಿಯ ವಶದ ಬುದ್ಧಿತತ್ವ, ಗರುಡ ದೇವರ ವಶದ ಚಿತ್ತವೆಂದು ಕರೆಸಿಕೊಳ್ಳುವ ಬುದ್ಧಿ. ಇವರಿಬ್ಬರೂ ಜೋಡಿ ಹೆಂಡರಿದ್ದಂತೆ. ಈ ಬುದ್ಧಿತತ್ವ ಮತ್ತು ಚಿತ್ತ ಇವೆರಡೂ ಓಡಿ ಹೋದರೆ ಇಂದ್ರ ಕಾಮರ ವಶವಾದ. ಗೋಡೆ ಎಂದರೆ ಬಾಹ್ಯ ಮನಸ್ಸಿನ ಸ್ಥಿತಿ ಬಿದ್ದು ಬಯಲಲ್ಲಿ ನಿಂತಂತೆ. ಅರ್ಥಾತ್ ಬಾಹ್ಯದ ಲೌಕಿಕ ಮೋಹದ ಹಾವಳಿಗೆ ಹಾಳಾಗುವುದು. ಹರಿಸ್ಮರಣೆ ಮತ್ತು ತತ್ವಜ್ಞಾನ. ಇವೆರಡೂ ಇದ್ದರೆ ಈ ದೇಹವೆಂಬ ಗೋಡೆ ಸ್ಥಿರವೆಂದೇ ಭಾವನೆ. ಇವರಿಬ್ಬರೂ ಶಾಸ್ತ್ರ ಶ್ರವಣದಿಂದ ನಮ್ಮನ್ನು ಬಿಟ್ಟು ಹೋಗುವಾಗ, ನಮ್ಮ ದೇಹವೆಂಬ ಗೋಡೆಯೇ ಬಿದ್ದಿರುತ್ತದೆ.

ಈ ದೇಹವಿರುವಷ್ಟು ಕಾಲ ಭಗವಂತನ ಬಗ್ಗೆ ಎಚ್ಚರಗೊಳ್ಳದೆ ಕಾಲ ನೂಕಿದ್ದಾಯಿತು. ಬೆಲ್ಲದಚ್ಚಿನಂತಿರುವ ಈ ಸಾಂಸಾರಿಕ ಸುಖದಲ್ಲೇ ಮೆಚ್ಚಾಗಿ ಮುಳುಗಿದ್ದಾಯಿತು. ಕಡೆಗೆ ಈ ಅಲ್ಪಸುಖವೂ ಮುಂದೆ ಬಂದ ಭಯಂಕರ ದುಃಖಾಗ್ನಿಯಲ್ಲಿ ಕರಗಿ ಹೋಯಿತು.

ಹಾಗೆ ಹೀಗೆ ಕಾಲ ನೂಕುವಷ್ಟರಲ್ಲಿ ಮುಪ್ಪು ಬಂದೇ ಬಿಟ್ಟಿತು. ಆದರೂ ರಾಮ ನಾಮವೆಂಬ ಪಾಯಸವನ್ನು ಸವಿಯಲೇ ಇಲ್ಲ.

ತುಪ್ಪದ ಬಿಂದಿಗೆ ಎಂದರೆ ಸಾಧನ ಶರೀರ ಹರಿಸ್ಮರಣೆ. ಸದ್ಗುರುಗಳ ಉಪದೇಶ ಯಾವುದು ಹೊಂದದೆ ಈ ಶರೀರ ಭೂಮಿಗೆ ಭಾರವಾಗಿದ್ದು ಧೊಪ್ಪನೆ ಬಿದ್ದು ಹೋಗುತ್ತದೆ. ಬುದ್ಧಿ ತತ್ವಜ್ಞಾನ ತುಂಬಿದ್ದರೂ ಅದರ ದುರುಪಯೋಗವಾದಾಗ ತಿಪ್ಪೆಗೆ ಬಿದ್ದ ಹಾಗೆ ಈ ಶರೀರ. ತಿಪ್ಪೆಗೆ ಬಿದ್ದ ತುಪ್ಪ ಎತ್ತಿಕೊಂಡರೆ ದುರ್ನಾತ ತಪ್ಪೀತೆ.

ಯೋಗ ಬಂದಿತು ಅಂದರೆ ಈ ಮಾನವ ಜನ್ಮ ಅತಿ ಶ್ರೇಷ್ಠವಾದುದು. ಇಂತಹ ಈ ಜನ್ಮ ಯೋಗವಲ್ಲದೆ ಮತ್ತೇನು? ಇಂತಹ ಯೋಗದ ಬದುಕು ವಿಭಾಗವಾಗಿ ಹೋಯ್ದು. ಬರಿ ದೇಹದ ಆರೈಕೆ, ಒಲೈಕೆ, ಹುಡುಗಾಟ, ಹುಡುಕಾಟ, ಬಾಲ್ಯ, ಯೌವ್ವನ, ಮುಪ್ಪು, ಬರಿದೆ ಜೀವನದ ಚಿಂತೆಗೆ ಹಂಚಿಹೋಯಿತು. ಆ ಕ್ಷಣಗಳಲ್ಲಿ ಆ ಭಗವಂತನ ನೆನೆಯದೆ ಸಿಕ್ಕ ಯೋಗವು ಹಾಳಾಯ್ತು. ಮಾನವ ಜನ್ಮ ದೊಡ್ಡದು ಇದ ಹಾಳು ಮಾಡದಿರಿ ಹುಚ್ಚಪ್ಪಗಳಿರಾ! ಕಣ್ಣು, ಕೈಕಾಲು, ನಾಲಿಗೆ ಇರಲಿಕ್ಕೆ ಮಣ್ಣು ಮುಕ್ಕಿ ಹುಚ್ಚರಾಗುವರೇ॥ ಹೀಗೆಲ್ಲ ಎಚ್ಚರಿಸಿದರೂ ಕೊಚ್ಚೆಯಲ್ಲೇ ಹೊರಳಾಡುವ ನಾವು ತಿಪ್ಪೆಯಲ್ಲಿ ಬಿದ್ದ ತುಪ್ಪದ ಬಿಂದಿಗೆಯೇ ಸರಿ.

ಅನುಸರಿಸಲು ಸಾಧ್ಯವಾದುದಷ್ಟಾದರೂ ಅನುಸರಿಸಬಹುದಲ್ಲವೇ. ಮೂರು ಹೊತ್ತು ಮೂಗು ಹಿಡಿದು ಮಂತ್ರ ಪಠಿಸಿ, ಭಜನೆಯಲ್ಲೇ ಕಾಲ ಕಳೆಯುವುದೇನಿಲ್ಲ. ಒಂದಿಷ್ಟು ಅಂಶಗಳ ಬುದ್ಧಿಗೆ ನಿಲುಕಿಸಿ ಪಾಲನೆ ಮಾಡುವುದರಲ್ಲಿ ತಪ್ಪೇನಿಲ್ಲ ಅಲ್ಲವೇ. ದಾಸಶ್ರೇಷ್ಠರು ನಮ್ಮ ಮುಂದೆ ಅರಿವಿನ ಬುತ್ತಿಯ ಬಿಚ್ಚಿಟ್ಟಿದ್ದಾರೆ ಉಣ್ಣುವುದು, ಚೆಲ್ಲುವುದು ನಮ್ಮ ಕರ್ಮಕ್ಕೆ ಬಿಟ್ಟಿದ್ದು. ❍

ಕವನ

# ದೀಪ ಆರಲೇ ಇಲ್ಲ !

- ಶಾರದಾ ಎ. ಅಂಚನ್, ಕೊಡವೂರು

ಘೋರ ಅಂಧಕಾರವೋ
ನಾಲ್ಕು ಸುತ್ತ ಕಾರ್ಮೋಡವೋ
ಭಕ್ತಿಯ ದೀಪವೋ
ಶಕ್ತಿಯ ದೀಪವೋ
ಸ್ವತಂತ್ರತೆಯ ದೀಪವೋ
ಸೌಜನ್ಯದ ದೀಪವೋ
ಅಂಗಣಂಗಣದಲಿ ಕಂಗೊಳಿಸುತಿಹ
ಈ ದೀಪ ಆರಲೇ ಇಲ್ಲ !
ನಿಶ್ಚಯದ ದೀಪ ಬೆಳಗುತಿದೆ।

ಚಲಿಸುತಿರುವ ನಾವೆಯೋ
ಅಬ್ಬರದ ಅಲೆಯೋ
ಸುಳಿಯುವ ಸುಂಟರಗಾಳಿಯೋ
ಧೋ ಎನ್ನುವ ಮಳೆಯೋ
ಅಂಧಕಾರ ಎದ್ದು ಕೊಡವಿದೆ
ಬೆಳಕ ಚಾಲನೆ ಆರಂಭಿಸಿದೆ
ಗಂಗೆಯಾ ತಟದಲಿ
ಈ ದೀಪ ಆರಲೇ ಇಲ್ಲ !
ಸ್ವದೇಶದ ದೀಪವೋ ಪ್ರಾಣಕ್ಕೆ ಸಮಾನ
ನಿನ್ನೆಯ ಕಲ್ಪನೆ
ನಾಳೆಯ ವಿನಮ್ರ ಪ್ರಾರ್ಥನೆ
ಪುನೀತ ಭಾವನೆ
ಶಾಂತಿಯಲಿ-ಅಶಾಂತಿಯಲಿ
ಯುದ್ಧದಲಿ-ಕ್ರಾಂತಿಯಲಿ
ರಕ್ತದೋಕುಳಿಯಲಿ
ದೇಶದಲಿ-ಸಮಾಜದಲಿ
ಈ ದೀಪ ಆರಲೇ ಇಲ್ಲ!
ಉಜ್ವಲ ಜ್ಯೋತಿಯ ಬೆಳಕಿದೆ

ಮೂರು ನಾಲ್ಕು ಹೂಗಳಿವೆ
ಸುತ್ತ ಮುತ್ತ ಧೂಳಿದೆ
ವಾಸನೆಯು ಗಮ್ಮೆನುತಿದೆ
ಹುಲ್ಲುಕಡ್ಡಿ ತರಚುತಿದೆ
ಸತ್ತ ವೀರಯೋಧನ
ಆತ್ಮ -ಪ್ರಾಣ ದಾನವೀಯಲು
ಸುಡುಗಾಡ ಸ್ಮಶಾನದಲಿ
ಈ ದೀಪ ಆರಲೇ ಇಲ್ಲ!
ಪುಣ್ಯ ಬೆಳಕು ಚೆಲ್ಲುತಿದೆ।

ರಂಗೋಲಿಯ ಚುಕ್ಕಿಯಲಿ
ಸನಾತನದ ಹೆಜ್ಜೆ
ಹಣತೆಯಾಗಿ ಗೋಚರಿಸಿದೆ
ದಿವ್ಯತೆ ಶೋಭಾಯಮಾನವಾಗಿ
ಬೆಳಕಲಿ ಪಸರಿಸಿದೆ
ಭತ್ತದ ತೆನೆಯಲಿ, ಬಲಿಯ ಶಿರದಲಿ
ಈ ದೀಪ ಆರಲೇ ಇಲ್ಲ !
ಭೂಮಿ ಜಗಮಗಿಸುತಿದೆ ॥

# ವಚನ ಬೆಳಗು

✍ ಶ್ರೀಮತಿ ಇಂದಿರಾ ಮೋಟೆಬೆನ್ನೂರ

'ಅಯ್ಯಾ ನೀ ಕೇಳಿದಿರೆ ಕೇಳು ಕೇಳದಿರ್ದೊಡೆ ಮಾಣು'

'ನಾ ನಿನ್ನ ಹಾಡಿದಲ್ಲದೆ ಸೈರಿಸಲಾರೆನಯ್ಯಾ'

'ನೀ ಒಲಿದರೆ ಒಲಿ ಒಲಿಯದಿರ್ದೊಡೆ ಮಾಣು'

'ನಾ ನಿನ್ನ ಪೂಜಿಸಿದಲ್ಲದೆ ಸೈರಿಸಲಾರೆನಯ್ಯಾ'

'ನೀ ಮೆಚ್ಚಿದರೆ ಮೆಚ್ಚು ಮೆಚ್ಚದಿರ್ದೊಡೆ ಮಾಣು'

'ನಾ ನಿನ್ನಪ್ಪಿದಲ್ಲದೆ ಸೈರಿಸಲಾರೆನಯ್ಯ'

'ಅಯ್ಯಾ ನೀ ನೋಡಿದೊಡೆ ನೋಡು ನೋಡದಿರ್ದೊಡೆ ಮಾಣು'

'ನಾ ನಿನ್ನ ನೋಡಿ ಹಿಗ್ಗಿ ಹಾರೈಸಿದಲ್ಲದೆ ಸೈರಿಸಲಾರೆನಯ್ಯಾ'

'ಚೆನ್ನಮಲ್ಲಿಕಾರ್ಜುನಯ್ಯ ನಾ ನಿನ್ನ ಪೂಜಿಸಿ'

'ಹರುಷದೊಳೋಲಾಡುವೆನಯ್ಯಾ'

**– ವೈರಾಗ್ಯ ನಿಧಿ ಅಕ್ಕಮಹಾದೇವಿಯವರು**

**ಸಂಕ್ಷಿಪ್ತ ಸಂಚಿತ ಭಾವಾರ್ಥ :**

ಅಕ್ಕಮಹಾದೇವಿಯವರು ತಮ್ಮ ಆರಾಧ್ಯ ದೈವ ಮಲ್ಲಯ್ಯ ಅಂದರೆ ಚೆನ್ನಮಲ್ಲಿಕಾರ್ಜುನನೊಡನೆ ನೇರ ದಿಟ್ಟ ಹೃದಯ ತೆರೆದಿಟ್ಟ ನಿವೇದನೆ.. ಅರಿಕೆ.. ಬಿನ್ನಹ.. ಪ್ರಾರ್ಥನೆ.

**'ಅಯ್ಯಾ ನೀ ಕೇಳಿದರೆ ಕೇಳು ಕೇಳದಿದ್ದರೆ ಮಾಣು'**

**'ನಾ ನಿನ್ನ ಹಾಡಿದಲ್ಲದೆ ಸೈರಿಸಲಾರೆನಯ್ಯ'**

ಎಷ್ಟು ಅರಸಿದರೂ ಕಾಣದ ಮಲ್ಲಯ್ಯ, ಎಷ್ಟು ಮಾತನಾಡಿಸಿದರೂ ಮಾತನಾಡದೆ ತನ್ನ ಹೃದಯ ಮಂದಿರದ ಬಾಗಿಲನ್ನು ಮುಚ್ಚಿ ಕಲ್ಲು ಹೃದಯವಾದ ಮಲ್ಲಯ್ಯ.. ಎಷ್ಟು ಪೂಜಿಸಿದರೂ ಅಕ್ಕನ ಒಲವಿನ ಪೂಜೆಗೆ ಒಲಿಯದ ಮಲ್ಲಯ್ಯ ಅಕ್ಕನ ಪರಿಶುದ್ಧ ಸ್ನೇಹ ಭಕ್ತಿ ನಿವೇದನೆಯನ್ನು ಆಲಿಸದ ಮಲ್ಲಿಕಾರ್ಜುನನನ್ನು ಕುರಿತು ಅಕ್ಕ ಈ ರೀತಿ ಹೇಳುತ್ತಿದ್ದಾಳೆ. ನೀ ನನ್ನ ಮಾತುಗಳನ್ನು ಕೇಳಿದರೂ ಸರಿ ಕೇಳದಿದ್ದರೂ ಸರಿ. ನಾನು ಮಾತ್ರ ನಿನ್ನೊಡನೆ ಮಾತಾಡದೆ ಇರಲಾರೆ.

'ಅಯ್ಯಾ ನೀ ನೋಡಿದರೆ ನೋಡು ನೋಡದಿದ್ದರೆ ಮಾಣು'

'ನಾ ನಿನ್ನ ನೋಡಿ ಹಿಗ್ಗಿ ಹಾರೈಸಿದಲ್ಲದೆ ಸೈರಿಸಲಾರೆನಯ್ಯ'

ನೀನು ಮೆಚ್ಚಿದರೂ, ಮೆಚ್ಚದಿದ್ದರೂ ನೀ ಒಲಿದರೂ ಒಲಿಯದಿದ್ದರೂ, ನಾನು ಮಾತ್ರ ನಿನ್ನ ಪೂಜಿಸದೆ, ಆರಾಧಿಸದೆ, ನಿನ್ನೊಡನೆ ಸಂಭಾಷಿಸದೆ ನಿನ್ನನ್ನು ನೋಡದೆ ಬಾಳಲಾರೆ.

'ಅಯ್ಯಾ ನೀ ಮೆಚ್ಚಿದೆ ಮೆಚ್ಚು ಮೆಚ್ಚದಿದ್ದರೆ ಮಾಣು'

'ನಾ ನಿನ್ನ ಅಪ್ಪಿ ಮುದ್ದಾಡಿದಲ್ಲದೆ ಸೈರಿಸಲಾರೆನಯ್ಯ'

ಈ ದೇಹದಲಿ ಕೊನೆ ಉಸಿರಿರುವವರೆಗೂ ನಿನ್ನನ್ನೇ ಸದಾ ಕಾಲ ನೆನೆಯುವೆ. ನಿನ್ನನ್ನೇ ಪೂಜಿಸುವೆ, ಆರಾಧಿಸುವೆ ಎಂದು ಮನದುಂಬಿ, ಹೃದಯದುಂಬಿ ಈ ವಚನದಲ್ಲಿ ಅಕ್ಕನವರು ಹೇಳಿದ್ದಾರೆ.

'ಅಯ್ಯಾ ನೀ ಒಲಿದರೆ ಒಲಿ ಒಲಿಯದಿದ್ದರೆ ಮಾಣು'

'ನಾ ನಿನ್ನ ಒಲಿದು ಪೂಜಿಸಿದ್ದಲ್ಲದೆ ಸೈರಿಸಲಾರೆನಯ್ಯ'

ಅಕ್ಕನ ಭಕ್ತಿಯ ತನ್ಮಯತೆಯ ನೋಟದಲ್ಲಿ ಹಿಗ್ಗಿದೆ. ಪ್ರೀತಿ, ಒಲವು ತುಂಬಿದ ಭಕ್ತಿಯಿಂದ ಅವನು ಒಲಿವನೋ ಬಿಡುವನೋ.

ಅಕ್ಕ ತಾವಂತೂ ಒಲಿದು ಹಾಡುತ್ತಿದ್ದಾರೆ. ಅಮೋಘ ಧಾಟಿಯ ಈ ವಚನದಲ್ಲಿ ಆ ದೇವನ ದಿವ್ಯ ಮೌನ ಅವರ ಭಕ್ತಿಯನ್ನು ಅಧಿಕಗೊಳಿಸುತ್ತಾ ಸಾಗುವುದನ್ನು ಕಾಣುತ್ತೇವೆ. ಭಕ್ತಿಯ ಪರಾಕಾಷ್ಠೆಯ ಜೊತೆ ಜೊತೆಗೆ ಅನುನಯದ ಅಂತರಂಗದ ಧ್ವನಿಯ ಸುಮಧುರ ಆಲಾಪವು ಈ ವಚನದಲ್ಲಿ ವೇದ್ಯವಾಗಿದೆ. ❍

*ಕೃತಿ ಪರಿಚಯ*

# ವೈದ್ಯ ಮತ್ತು ರೋಗಿಗಳ ಭಾವನಾತ್ಮಕ ಸಂಬಂಧಗಳಿಗೆ ಒತ್ತು ಕೊಡುವ 'ವೈದ್ಯನ ಕೋಣೆಯಲ್ಲಿ ಒಂದು ಇಣುಕು' ಕೃತಿ

✍ ಡಾ. ಕರುಣಾಕರ ಎನ್. ಶೆಟ್ಟಿ

'ವೈದ್ಯನಕೋಣೆಯಲ್ಲಿ ಒಂದು ಇಣುಕು' ಕೃತಿ ಮೂಲ ಇಂಗ್ಲೀಷ್‌ನಲ್ಲಿ ಡಾ. ಎಸ್. ಜಿ. ಮೂರ್ತಿಯವರು ಬರೆದಿದ್ದರೆ, ಶ್ರೀ ಬಿ. ಎಚ್. ಕಟ್ಟಿಯವರು ಅಷ್ಟೇ ಸುಂದರವಾಗಿ ಕನ್ನಡ ಭಾಷೆಗೆ ಅನುವಾದಿಸಿದ್ದಾರೆ. ಅನುವಾದಿಸುವುದೂ ಒಂದು ಕಲೆ. ಅನುವಾದಿಸುವಾಗ ಅನುವಾದಕನು ಇದ್ದಕ್ಕಿದ್ದಂತೆಯೇ ಅನುವಾದಕ್ಕೆ ಪ್ರಯತ್ನಿಸದೆ ಶಬ್ಧ ಶಬ್ಧದ ಯಥಾರ್ಥ ಅನುವಾದ ಮಾಡದೆ, ಒಟ್ಟು ವಾಕ್ಯದ ಭಾವಾರ್ಥ ಬರುವಂತೆ ವಾಕ್ಯ ರಚನೆ (ಅನುವಾದ) ಇದ್ದರೆ ಅದು ಯಶಸ್ವಿ ಅನುವಾದವೆನಿಸುತ್ತದೆ. ಇಲ್ಲಿ ಬರುವ ಕಥೆ ಯಾ ಘಟನೆಗಳಲ್ಲಿ ಬಿ. ಎಚ್. ಕಟ್ಟಿಯವರು ಈ ಜಾಗ್ರತೆಯನ್ನು ವಹಿಸಿದ್ದಾರೆ. ಇಲ್ಲಿ ಬರುವ ಕಥೆಗಳು ಇಂಗ್ಲೀಷ್‌ನ ತರ್ಜುಮೆ ಎನಿಸದೆ ಇವು ಬಿ. ಎಚ್. ಕಟ್ಟಿಯವರ ಕಥೆಗಳೋ ಎನ್ನುವ ಹಾಗೆ ಮೂಡಿ ಬಂದಿದೆ. ಇಷ್ಟರವರೆಗೆ ಬಿಡಿ ಲೇಖನಗಳ ಲೇಖಕರೆನಿಸಿಕೊಂಡಿರುವ ಕಟ್ಟಿಯವರು ಅಧಿಕೃತವಾಗಿ ಕಥೆಗಾರರೆನಿಸಿದ್ದಾರೆ. ಈ ಇಪ್ಪತ್ತೂ ಕಥೆಗಳು ಸತ್ಯ ಘಟನೆಗಳ ಆಧಾರದ ಮೇಲೆ ಬರೆದಿರುವುದರಿಂದ ಹಾಸ್ಯದ ಲೇಪನವನ್ನು ಬಳಸುವುದು ಮೂಲ ಲೇಖಕರಿಗೆ ಅನಿವಾರ್ಯವಾಗಿದ್ದು ಇದು ಕಥೆಯ ಸ್ವಾರಸ್ಯವನ್ನು ಹೆಚ್ಚು ಮಾಡಿದೆ. ವೈದ್ಯ ವೃತ್ತಿ ಎಂದರೆ ಇಂದು ಹೆಚ್ಚಿನವರ ಮನದಲ್ಲಿ ಸುಲಭವಾಗಿ ಹಣವನ್ನು ಅಚ್ಚು ಮಾಡುವ ಉದ್ಯೋಗ ಎಂದಿದ್ದರೂ, ಡಾ. ಎಸ್. ಜಿ. ಮೂರ್ತಿಯಂತವರು ಈ ಮಾತಿಗೆ ಅಪವಾದವೆನಿಸುತ್ತಾರೆ.

ಇಲ್ಲಿ ಕನ್ನಡ ಭಾಷೆಗೆ ಅನುವಾದಿಸಿ ಕಟ್ಟಿಯವರೂ ಅಭಿನಂದನೀಯ ಕಾರ್ಯ ಮಾಡಿದ್ದಾರೆ. ಕಥಾ ಸಂಕಲನದ ಮೊದಲ ಕಥೆ, ಅಂದಿನ ಕೊನೆಯ ಗಿರಾಕಿ. ರೋಗಿಯಂತೆ ನಟಿಸುತ್ತ ತಾನು ಅಪಹರಣ ಮಾಡಿದ ಸುಮಾರು ಎರಡು ವರ್ಷದ ಹೆಣ್ಣು ಮಗುವಿನೊಂದಿಗೆ ಆಸ್ಪತ್ರೆಗೆ ಬರುವ ಕಳ್ಳ, ಕೊನೆಗೂ ಕಥೆ ಸುಖಾಂತ್ಯವಾಗಿ ಮುಗಿಯುತ್ತದೆ. ಅರ್ಧಾಂಗ ವಾಯು ಕಥೆಯಲ್ಲಿ ಮದುವೆ ನಿಶ್ಚಿತವಾಗಿರುವ ಅರ್ಧಾಂಗ ಪೀಡಿತ ಹೆಣ್ಣಿನ ಬಗ್ಗೆ ಆಕೆಯ ರೋಗದ ಬಗ್ಗೆ ಸತ್ಯ ಹೇಳಿ ಕೊನೆಗೂ ಅವರ ಮದುವೆ ಮಾಡಿಸುವ ಕಥೆ ಓದಿಸಿ ಕೊಂಡು ಹೋಗುತ್ತದೆ. ಆರೋಗ್ಯ ವಿಮೆ, ವಿಮೆ ಮಾಡಿಸಿ ಕೊಳ್ಳುವ ಜನರ ಮನಸ್ಥಿತಿಯ ಮೇಲೆ ಬೆಳಕು ಬೀರುವ ಕಥೆ. ಕಥಾ ನಾಯಕ ಸೂರ್ಯಕಾಂತನ ಅವಸ್ಥೆಗೆ ಮನಸು ಮಮ್ಮಲ ಮರುಗುತ್ತದೆ. ಕಣ್ಣು ಕಾಣದ ಮಗು ಕಥೆಯಲ್ಲಿ ಸಾಧು ಮಹಾರಾಜರ ಪವಾಡದಿಂದ ಮಗುವಿನ ಕಣ್ಣು ಸ್ವಲ್ಪ ಮಟ್ಟಿಗಾದರೂ ಸರಿ ಹೋಗುವ ಪ್ರಸಂಗ ಬರುತ್ತದೆ. ವಿಜ್ಞಾನಕ್ಕೆ ಸವಾಲು ಹಾಕುವ ಇಂತಹ ಪ್ರಸಂಗಗಳು ಕೆಲವೊಮ್ಮೆ ನಡೆದು ಬಿಡುತ್ತದೆ. ಹೆಣ್ಣು ಮಗಳ ಕಥೆ ಹೃದಯ ವಿದ್ರಾವಕ ಕಥೆ. ತಾನು ಕರ್ಕ ರೋಗದಿಂದ ಬಳಲುತ್ತಿದ್ದರೂ, ಏಕ ಮಾತ್ರ ಸಂತಾನವಾಗಿದ್ದ ಆಕೆ ತಾನು ಸಾಯುವ ಮೊದಲು ತನ್ನನ್ನೇ ನಂಬಿಕೊಂಡಿದ್ದ ಪೋಷಕರಿಗೆ ಜೀವನ ಸಾಗಿಸಲು ದಾರಿ ತೋರಿಸುವ ಕಥೆ. ಇದರಲ್ಲಿ ವೈದ್ಯರ ಯೋಗ ದಾನವೂ ಅಷ್ಟೇ ಮಹತ್ವವಾದುದು. 'ನನ್ನ ಔದಾರ್ಯ ಕಥೆ' ಇಂತಹ ಒಳ್ಳೆಯ ಮನಸಿನ ವೈದ್ಯರೂ ಇರುತ್ತಾರೆಯೇ ಎಂದು ಓದುಗರನ್ನು ವಿಸ್ಮಯ ಪಡಿಸುತ್ತದೆ. ಕ್ಷಯ ರೋಗದಿಂದ ಬಳಲುತ್ತಿರುವ ದಿನಗೂಲಿ ಕಾರ್ಮಿಕಳಿಗೆ ಕಡಿಮೆ ದರದಲ್ಲಿ ಮದ್ದು ಹಾಗೂ ತಮ್ಮ ಕಿಸೆಯ ಹಣದಿಂದ ಆಕೆಯ ಮತ್ತು ಮಕ್ಕಳ ಊಟದ ವ್ಯವಸ್ಥೆಯನ್ನೂ ಮಾಡಿಸುತ್ತಾರೆ. ಇಂತಹ ವೈದ್ಯರನ್ನು ಕಂಡೇ ವೈದ್ಯೋ ನಾರಾಯಣೋ ಹರಿ ಎಂದು ಕರೆದಿರಬೇಕು. ಇಲ್ಲಿ ಈ ಸಂಕಲನದಲ್ಲಿ ಬರುವ ಹೆಚ್ಚಿನ ಎಲ್ಲಾ ಕಥೆಗಳೂ ವೈದ್ಯ ಮಹಾಶಯರ ಮತ್ತು ರೋಗಿಗಳ ನಡುವಿನ ಆಪ್ತ ಸಂಬಂಧವನ್ನು ನವಿರಾಗಿ ತೆರೆದಿಡುವಲ್ಲಿ ಸಫಲವಾಗಿವೆ. ಸತ್ಯ ಘಟನೆಗಳ ಆಧಾರದ ಮೇಲೆ ಬರೆದಿರುವ ಈ ಕಥೆಗಳು ಸರಳ ಭಾಷೆಯಲ್ಲಿ ಮೂಡಿ ಬಂದಿದ್ದು ಓದಿಸಿಕೊಂಡು ಹೋಗುತ್ತವೆ. ಇಂಗ್ಲೀಷ್ ಭಾಷೆಯಿಂದ ಕನ್ನಡ ಭಾಷೆಗೆ ಅನುವಾದ ಮಾಡಿ ಬಿ. ಎಚ್. ಕಟ್ಟಿ ಯವರು ಒಂದು ಒಳ್ಳೆಯ ಕೃತಿಯನ್ನು ಕನ್ನಡ ಸಾಹಿತ್ಯ ಲೋಕಕ್ಕೆ ನೀಡಿ ಮಹದುಪಕಾರ ಮಾಡಿದ್ದಾರೆ.

ಬಿ. ಎಚ್. ಕಟ್ಟಿಯವರು ಹಲ ಕೆಲವು ವರ್ಷಗಳಿಂದ ಪರಿಚಿತರು. ಡಾ ಜಿ. ಡಿ. ಜೋಶಿ ಪ್ರತಿಷ್ಠಾನ ಆಯೋಜನೆಯ ಮನೆ ಮನೆಯಲ್ಲಿ ಕನ್ನಡ ಸಾಹಿತ್ಯ ಅಲ್ಲದೇ ಅವರು ವಾಶಿ ಕನ್ನಡ ಸಂಘದ ಮುಖವಾಣಿಯ ಮಾಜಿ ಸಂಪಾದಕರಾಗಿಯೂ ದುಡಿದವರು.

ಈ ವೈದ್ಯನ ಕೋಣೆಯಲ್ಲಿ ಒಂದು ಇಣುಕು ಮೊದಲ ಕೃತಿಯ ಮೂಲಕ ಕಥೆಗಾರರಾಗಿ ಸಾಹಿತ್ಯ ಲೋಕ ಪ್ರವೇಶ ಮಾಡಿದ್ದಾರೆ. ಅವರ ಸಾಹಿತ್ಯಯಾನ ಇದೇ ರೀತಿ ಮುಂದೆ ಮುಂದೆ ಸಾಗಲಿ ಎನ್ನುವುದೇ ನಮ್ಮ ಹರಕೆ ಮತ್ತು ಹಾರೈಕೆ ಕೂಡಾ.

ಈ ಸುಂದರ ಕೃತಿ ಗೆ ಪತ್ರ ಕರ್ತ ಶ್ರೀನಿವಾಸ ಜೋಕಟ್ಟೆ ಸುಂದರ ಮುನ್ನುಡಿ ಬರೆದಿದ್ದರೆ ಅಷ್ಟೇ ಚಂದದ ಬೆನ್ನುಡಿಯನ್ನು ಲೇಖಕ ಸೋಮನಾಥ ಕರ್ಕೇರಾ ಅವರು ಬರೆದು ಕೃತಿಯ ಮೆರುಗು ಹೆಚ್ಚಿಸಿದ್ದಾರೆ.

ಬಿ. ಎಚ್. ಕಟ್ಟಿಯವರಿಗೆ ಈ ಹೊಸ ಕೃತಿಗಾಗಿ ಮತ್ತೊಮ್ಮೆ ಅಭಿನಂದನೆಗಳು.

ಪ್ರತಿಗಾಗಿ ಸಂಪರ್ಕಿಸಬೇಕಾದ
ಮೊಬೈಲ್ ಸಂಖ್ಯೆ : 9820574515

ಕವನ

# ಜನಕನ ಸೋಲು ?

## (ಅಂಶಗಣ ತ್ರಿಪದಿ)

**- ಬೋರೇಗೌಡ-ಅಂಕಪುರ**

ಕಂದನ ಒಳಿತಿಗೆ ತಂದೆಯು ದುಡಿಯುತ
ಮುಂದಿನ ಬದುಕು ಹಸನಾಗಿ / ಇರಲೆಂದು
ಬಿಂದಿಗೆ ಹಣವ ಕೂಡಿಟ್ಟ॥

ಭಂಗವ ಮಾಡದೆ ಚಂಗಲು ತಿರುಗುತ
ಸಂಗದ ಜೊತೆ ಹುಡುಗರ / ಸೇರುತ
ಮಂಗನ ಬುದ್ಧಿ ಕಲಿತಿದ್ದ ॥

ಬುದ್ಧಿಯ ಕಲಿಯದ ಬದ್ಧತೆ ತಿಳಿಯದ
ಶುದ್ಧತೆ ನಡೆಯ ಕಲಿಯದ / ಹುಡುಗನು
ಪೆದ್ದನ ನಡೆಯ ತೋರಿದ್ದ ॥

ಮುದ್ದಿನ ಮಗನಲಿ ಶ್ರದ್ದೆಯ ಕಾಣದೆ
ತಿದ್ದುವ ಭಾವ ತೋರಿದ್ದ / ಜನಕನು
ಬುದ್ಧಿಯ ಹೇಳಿ ಸೋತಿದ್ದ ॥

ತಂದೆಯ ಮಾತನು ಕಂದನು ಮೀರುತ
ಬಂಧಿತನಾದ ಕೊಲೆಮಾಡಿ / ಅಪ್ಪನ
ಬಿಂದಿಗೆ ಹಣವು ಕರಗಿತ್ತ ॥

ooo

ಕವನ

# ಕಾಜಿಗಾರೆ ಜಾಲ್‌ಗ್ ಬೈದೆ ?

**- ವಿಶ್ವನಾಥ ಕುಲಾಲ್, ಮಿತ್ತೂರು**

ಕಾಜಿಗಾರೆ ಜಾಲ್‌ಗ್ ಬೈದೆನೆ
ಲೆಪ್ಪುಲೆ ಆಯನ್ ಚಾವಡಿಗ್
ಪುದೆನ್ ಜಾವಡ್ ಒಂಚೂರು ಕುಲ್ಲಡ್
ದಾದಂದ್ ಕೇನ್‌ಲೆ ಬಾಜೆಲ್‌ಗ್

ಅಕ್ಕನ್, ಮೆಗ್ದಿನ್, ಮಾಮಿನ್ ಲೆಪ್ಪುಲೆ
ಕಾಜಿದ ಪೊರ್ಲುನು ತೂಯೆರೆಗ್
ದೊಡ್ಡನ್ ಬೇಗನೆ ಬರ್ಯೆರೆ ಪನ್ಲೆ
ಸುರುಟು ಕಾಜಿನ್ ದೀಯೆರೆಗ್

ಏರೆಗ್ ಒವ್‌ಒವು ಬಣ್ಣದ ಕಾಜಿಲು
ಬೋಡುಂದು ತೂದು ಅಜತೊನ್ಲೆ
ಜಾತ್ರೆಡ್ ತಿರ್ಗ್‌ಯೆರೆ, ಮದಿಮೆಗ್ ಪೋಯೆರೆ
ಏತೇತ್ ಬೋಡು ಗೆನ್ಲೊನ್ಲೆ

ಈವೊಡು ತತ್ತ್‌ಂಡ ದುಂಬಾಗೆ ಬರ್ಪುನೆ
ಪನ್ಪಿನ ನೆಂಪುನು ಮನ್ತೊನ್ಲೆ
ಆಯನ ಸಂಸಾರ ಐಟೇ ನಡಪುನೆ
ಐನ್‌ಲಾ ಗೇನೊಡು ದೀವೊನ್ಲೆ

ಇತ್ತೆದ ಜೋಕ್ಲೆಗ್ ಕಾಜಿಲೇ ಬೊಡ್ಚಿ
ಅಕ್ಲೆಗ್ ಪಂಡ್‌ದ್ ತೆರಿಪಾಲೆ
ನಮ್ಮ ಸಂಸ್ಕೃತಿದ ಐಸಿರೊ ಅವ್ವೆಗೆ
ಐನ್‌ಲಾ ಅಂಚನೆ ಒರಿಪಾಲೆ

ooo

*With*
*Best Compliments*
*From :*

*Chandrahas Shetty* (CEO)

**Skytech**
**Systems (India) Pvt. Ltd.**
**&**
**BHARTI ENTERPRISE**

*401, Siddeshwar Arcade, Opp. Suraj Water Park,*
*Ghodbunder Road, Thane (W) - 400 607.*

*Tel. : 022-2597 5110*
*Fax : 022-2597 5116*

*E-mail : shetty@skytechindia.com*
*Website : www.skytechindia.com*

Best Wishes From :
Sunil Alva

UNIQUE EXPRESS

UNIQUE
AIR FREIGHT
EXPRESS
& LOGISTICS PVT. LTD.

2/A, Planet Industrial Estate,
Opp. United Ink, Subhas Road,
Vile Parle (E), Mumbai - 400 057.

Tel : 022-4228 5850/6694 1984
Fax : 022 - 4228 5888
E-mail : customercare@uniqueairfreight.com
BHIWANDI : 97690 11162

A name to remembered for Best,
Tasty & Delicious Food

ಶುಚಿ
ರುಚಿಗೆ
ಹೆಸರಾದ
ಮುಂಬಯಿಯ

Laxmj CATERERS
SERVICE WITH SMILE



# ಲಕ್ಷ್ಮೀ ಕೇಟರರ್ಸ್

**South Indian, Punjabi & Chinese Dishes,
All types of Catering service available
for all occasion.**

**We are the official caterers of :**

- **Buntara Bhavana - Kurla**
- **Manav Seva Sangha - Sion**
- **Vallabh Sangeet Vidyalaya - Sion**
- **Chedda Ngr. Gymkhana - Chembur**
- **S.M. Shetty High School - Powai**

We undertake Outdoor Catering All over Mumbai Assistance
in Hall Booking & Allied Matter

SPECIAL DISCOUNT FOR KANNADIGAS

*For Booking Contact* : **SATISH R. SHETTY**
Vallabh Sangeet Vidyalaya (Next to Swami Nityanand Hall),
Ground Floor, Plot No. 6, Road No. 24, Sion (W),
Mumbai - 400 022.
**✆ Off. : 2403 5191 • Mobile : 98211 80002 / 98211 84002**

*Advt.*

## ಥಾಣೆ ಬಂಟ್ಸ್ ವೈವಾಹಿಕ ಕೇಂದ್ರ



ಸಮಾಜಮುಖಿ ಕಾರ್ಯಗಳಿಗೆ ಸದಾ ಪ್ರಚೋದನೆ ಕೊಡುವ ಥಾಣೆ ಬಂಟ್ಸ್ ಎಸೋಸಿಯೇಶನ್ ಸಮಾಜಬಾಂಧವರಿಗೆ ವೈವಾಹಿಕ ಹೊಂದಾಣಿಕೆ ಮಾಡಿಕೊಳ್ಳಲು ಆಗುತ್ತಿರುವ ತೊಂದರೆಗಳನ್ನು ಮನಗಂಡು ಕಳೆದ ಕೆಲವು ವರ್ಷಗಳಿಂದ ವೈವಾಹಿಕ ಹೊಂದಾಣಿಕೆ ಕೇಂದ್ರವನ್ನು ನಡೆಸುತ್ತಿದೆ. ಸದಸ್ಯ ಬಾಂಧವರು ಇದರ ಪ್ರಯೋಜನವನ್ನು ಪಡೆದುಕೊಳ್ಳಬೇಕು.

**ಗೀತಾ ವಸಂತ್ ಶೆಟ್ಟಿ**, ಕಾರ್ಯಾಧ್ಯಕ್ಷರು ಮ್ಯಾರೇಜ್ ಸೆಲ್

**Ph. : 90295 78156**

## ಸದಸ್ಯರ ಗಮನಕ್ಕೆ

ಥಾಣೆ ಬಂಟ್ಸ್ ಎಸೋಸಿಯೇಶನ್ ಮುಖವಾಣಿ ಸ್ನೇಹ ಸೌರಭ ಸಂಘದ ಚಟುವಟಿಕೆಗಳನ್ನು ಸದಸ್ಯರ ಮನೆಬಾಗಿಲಿಗೆ ತಲುಪಿಸುವ ಪ್ರಯತ್ನ. ಇದು ಪ್ರತಿಯೋರ್ವ ಸದಸ್ಯನ ಪತ್ರಿಕೆ. ಇದನ್ನು ಪೋಷಿಸುವುದು, ಬೆಳೆಸುವುದು ನಮ್ಮೆಲ್ಲರ ಕರ್ತವ್ಯ. ಪತ್ರಿಕೆಯ ಸದಸ್ಯನಾಗಿಯೂ, ಜಾಹೀರಾತು ನೀಡಿಯೂ ತಾವು ಸಹಕರಿಸುವಿರೆಂಬ ನಂಬಿಕೆ ನಮಗಿದೆ.

ಸದಸ್ಯರ ಮನೆಯಲ್ಲಿ ಏರ್ಪಡುವ ಮದುವೆ, ನಿಶ್ಚಿತಾರ್ಥ, ಪೂಜೆ-ಪುರಸ್ಕಾರ ಮುಂತಾದ ಶುಭ ಕಾರ್ಯಗಳ ವಿವರಗಳನ್ನು ಸಂಘಕ್ಕೆ ಕಳುಹಿಸಿ, ಅಲ್ಲದೆ ಆತ್ಮೀಯರು ತೀರಿಕೊಂಡಾಗ ಉತ್ತರಕ್ರಿಯೆಯ ವಿವರಗಳನ್ನು ಕಳುಹಿಸಿಕೊಟ್ಟಲ್ಲಿ ಅದನ್ನು ಪ್ರಕಟಿಸುತ್ತೇವೆ. ಆಫೀಸಿನಲ್ಲಿ ನೀವು ನಿಮ್ಮ ಮಕ್ಕಳು ಬಡ್ತಿ, ಕ್ರೀಡಾರಂಗದಲ್ಲಿ ಯಶಸ್ಸು, ಹೆಚ್ಚಿನ ಅಂಕ ಪಡೆದು ಉತ್ತೀರ್ಣರಾದವರ ವರದಿಗಳನ್ನು ಕಳುಹಿಸಿಕೊಟ್ಟಲ್ಲಿ ಪ್ರಕಟಿಸಲಾಗುವುದು.

ಕಥೆ-ಕವನ, ನಗೆಹನಿ, ವ್ಯಕ್ತಿಪರಿಚಯ, ವಿಮರ್ಶೆ, ವೈಚಾರಿಕ ಲೇಖನ ಕಳುಹಿಸಿಕೊಡಿ. ಪ್ರಕಟಣೆಗೆ ಅರ್ಹವಿದ್ದರೆ ಪ್ರಕಟಿಸುತ್ತೇವೆ. ನಮ್ಮ ನಿಮ್ಮ ಸೃಜನಶೀಲತೆಯ ಪ್ರತಿಬಿಂಬವೇ ಈ "ಸ್ನೇಹ ಸೌರಭ."

**ಸಂಪಾದಕರು**

## ‘ಸ್ನೇಹ ಸೌರಭ’ದ ಸದಸ್ಯರಾಗಿ, ಸ್ನೇಹ ಸೌರಭದಲ್ಲಿ ಜಾಹೀರಾತು ನೀಡಿ ನಮ್ಮೊಡನೆ ಸಹಕರಿಸುವಿರಾ...

‘ಸ್ನೇಹ ಸೌರಭ’ ನಮ್ಮ ಎಸೋಸಿಯೇಶನ್‌ನ ಮುಖವಾಣಿ; ಬಂಟ ಬಾಂಧವರ ನಡುವಿನ ಸ್ನೇಹ ಸೇತುವೆ; ನಮ್ಮ ನಿಮ್ಮೆಲ್ಲರ ನೆಚ್ಚಿನ ಪತ್ರಿಕೆ! ಈ ಪತ್ರಿಕೆಗೆ ಜಾಹೀರಾತು ನೀಡುವುದರ ಮೂಲಕ, ಪತ್ರಿಕೆಯ ಚಂದಾದಾರರಾಗುವ ಮೂಲಕ ಇಂದು ಅಂಕುರಿಸಿರುವ ಪತ್ರಿಕೆಗೆ ಪ್ರೋತ್ಸಾಹದ ನೀರೆರೆಯಿರಿ; ಈ ಅಂಕುರ ಗಿಡವಾಗಿ, ಮರವಾಗಿ ಬೆಳೆದು ‘ಸ್ನೇಹ’ ಹೂ ಬಿಟ್ಟು ತನ್ನ ‘ಸೌರಭ’ವನ್ನು ಎಲ್ಲೆಡೆಗೆ ಹರಡಲು ಸಹಕರಿಸಿರಿ.

### "SNEHA SAURABHA" ADVERTISEMENT TARRIFF

| | Per Year | 2 Years |
|---|---|---|
| Back Cover Page | Rs. 24,000/- | Rs. 43,000/- |
| Cover Inside Page (Front / Back) | Rs. 20,000/- | Rs. 36,000/- |
| Inside Colour Page | Rs. 18,000/- | Rs. 32,250/- |
| Full Page | Rs. 12,000/- | Rs. 21,500/- |
| Half Page | Rs. 9,000/- | Rs. 16,200/- |

### "SNEHA SAURABHA" MEMBERSHIP

| | |
|---|---|
| Life Member | Rs. 500/- |
| Patron | Rs. 1,500/- |
| Grand Patron | Rs. 2,500/- |

### ಥಾಣೆ ಬಂಟ್ಸ್ ಎಸೋಸಿಯೇಶನ್ ಸದಸ್ಯರಾಗಿ ಸಂಸ್ಥೆಯನ್ನು ಬೆಳೆಸಿರಿ
### THANE BUNTS ASSOCIATION

| | | |
|---|---|---|
| Grand Patron | Rs. 5,000/- | (For Couple / Individual) |
| Patron Member | Rs. 2,500/- | (For Couple / Individual) |
| Paramount Member | Rs. 1,000/- | (For Couple / Individual) |
| Life Member | Rs. 500/- | (For Couple / Individual) |

### ವಿಳಾಸ ಬದಲಾದ ಸದಸ್ಯ ಬಾಂಧವರಲ್ಲಿ ವಿನಂತಿ.

ಪ್ರತಿಯೊಬ್ಬ ಸದಸ್ಯನೂ ತನ್ನ ವಿಳಾಸ ಬದಲಾದ ಕೂಡಲೇ ಅದನ್ನು ‘ಥಾಣೆ ಬಂಟ್ಸ್’ನ ಕಛೇರಿಗೆ ತಿಳಿಸಬೇಕು. ನಮ್ಮ ನಿಮ್ಮ ಸಂಪರ್ಕ ಕೇವಲ ಪತ್ರಮುಖೇನ ಅಥವಾ ದೂರಧ್ವನಿ ಮೂಲಕ ಮಾತ್ರ ಸಾಧ್ಯ ಎಂಬುದು ತಮಗೂ ಗೊತ್ತು. ನೀವು ನಿಮ್ಮ ಸರಿಯಾದ ವಿಳಾಸ ಮತ್ತು ಸರಿಯಾದ ದೂರಧ್ವನಿ ಕ್ರಮಾಂಕವನ್ನು ನೀಡದಿದ್ದರೆ ನಿಮ್ಮನ್ನು ಸಂಪರ್ಕಿಸುವುದು ಅಸಾಧ್ಯ. ಪ್ರತಿಸಲ ವಿಳಾಸ ಬದಲಾದ ಕಾರಣ ಅಥವಾ ವಿಳಾಸ ಸರಿಯಿಲ್ಲದ ಕಾರಣ ಕೊರಿಯರ್‌ನಲ್ಲಿ ಕಳುಹಿಸಿದ ನೂರಕ್ಕಿಂತಲೂ ಹೆಚ್ಚು ಪತ್ರಗಳು ಹಿಂದೆ ಬರುತ್ತವೆ. ಇದರಿಂದ ತಮಗೆ ಹಾನಿ; ಸಂಸ್ಥೆಗೂ ಅನಗತ್ಯ ಖರ್ಚು. ಆದುದರಿಂದ ದಯವಿಟ್ಟು ನಿಮ್ಮ ಹಾಗೂ ಸಂಸ್ಥೆಯ ಹಿತವನ್ನು ಗಮನದಲ್ಲಿರಿಸಿ ನಿಮ್ಮ ಸರಿಯಾದ ವಿಳಾಸವನ್ನು ಸಂಘದ ಕಛೇರಿಗೆ ತಿಳಿಸಿರಿ ಅಥವಾ ಕಛೇರಿಯ ಈ ದೂರಧ್ವನಿ ಕ್ರಮಾಂಕದಲ್ಲಿ ಸಂಪರ್ಕಿಸಿರಿ.

# ಥಾಣೆ ಬಂಟ್ಸ್ ಎಸೋಸಿಯೇಶನ್
# THANE BUNTS ASSOCIATION

101, ಜೈಶಂಕರ್ ಕೋ.ಆಪ. ಹೌಸಿಂಗ್ ಸೊಸ್ಯಾಟಿ ಲಿ. ಆಕ್ಸಿಸ್ ಬ್ಯಾಂಕಿನ ಎದುರು,
ಎಲ್.ಬಿ.ಎಸ್. ಮಾರ್ಗ, ಹರಿನಿವಾಸ, ಥಾಣೆ (ಪ)
ಮೊಬೈಲ್ : 7506371586
e-mail : thanebunts@gmail.com / web : www.thanebunts.org


## 'ಸ್ನೇಹ ಸೌರಭ' ದ ಪತ್ರಿಕೆಯ ಸದಸ್ಯತ್ವದ ಅರ್ಜಿ

'ಸ್ನೇಹ ಸೌರಭ' ನಮ್ಮ ಎಸೋಸಿಯೇಶನ್‌ನ ಮುಖವಾಣಿ; ಬಂಟ ಬಾಂಧವರ ನಡುವಿನ ಸ್ನೇಹ ಸೇತುವೆ; ನಮ್ಮ ನಿಮ್ಮೆಲ್ಲರ ನೆಚ್ಚಿನ ತ್ರೈಮಾಸಿಕ ಪತ್ರಿಕೆ! ಪತ್ರಿಕೆಯ ಚಂದಾದಾರರಾಗಿ ಇಂದು ಅಂಕುರಿಸಿರುವ ಪತ್ರಿಕೆಗೆ ಪ್ರೋತ್ಸಾಹದ ನೀರೆರೆಯಿರಿ; ಈ ಅಂಕುರ ಗಿಡವಾಗಿ, ಮರವಾಗಿ ಬೆಳೆದು 'ಸ್ನೇಹ' ದ ಹೂ ಬಿಟ್ಟು ತನ್ನ 'ಸೌರಭ' ವನ್ನು ಎಲ್ಲೆಡೆಗೆ ಹರಡಿಸಲಿ.

| ಸುನೀಲ್ ಜೆ. ಶೆಟ್ಟಿ | ಸುರೇಶ್ ಶೆಟ್ಟಿ, ಕಡಂದಲೆ | ಡಾ. ಕರುಣಾಕರ್ ಶೆಟ್ಟಿ, ಪಣಿಯೂರು |
|---|---|---|
| ಅಧ್ಯಕ್ಷರು | ಕಾರ್ಯಾಧ್ಯಕ್ಷರು | ಪ್ರಧಾನ ಸಂಪಾದಕರು |

---

ಹೆಸರು : ..........................................................................................

ವಿಳಾಸ : ..........................................................................................

..........................................................................................

ಫೋನ್ (ಮೊಬೈಲ್) : ..........................................................................................

ಲ್ಯಾಂಡ್‌ಲೈನ್ : ..........................................................................................

ಇ-ಮೇಲ್ : ..........................................................................................

ಸದಸ್ಯತ್ವ : ಮಹಾಪೋಷಕ ರೂ. 2500, ಪೋಷಕ ರೂ 1500,
ಆಜೀವ ಸದಸ್ಯ ರೂ. 500

ಸದಸ್ಯತ್ವ ನೋಂದಾಯಿಸಿ
ದವರ ಹೆಸರು : ..........................................................................................

---

**ವಿಳಾಸ ಬದಲಾದ ಸದಸ್ಯ ಬಾಂಧವರಲ್ಲಿ ವಿನಂತಿ.**

ಪ್ರತಿಯೊಬ್ಬ ಸದಸ್ಯನೂ ವಿಳಾಸ ಬದಲಾದ ಕೂಡಲೇ ಅದನ್ನು 'ಥಾಣೆ ಬಂಟ್ಸ್' ನ ಕಛೇರಿಗೆ ತಿಳಿಸಬೇಕು.




YUVIKA 2024 FASHION SHOW - FIRST PLACE



GARBA NIGHT BY YOUTHWING 2024



YUVIKA SINGING 1ST PRIZE - PRATAM SHETTY


*With Best Compliments From :*

# Li-Vans
## MEN'S WEAR

Customized Tailoring For Men And Women
Suits ,Trousers , Shirts And Ethnic wear
We are also stockiest of leading brands Like
Raymond , Siyaram's , ARVIND , Reid & Taylor, Linen
And also Imported Fabrics

**Contact Mr. Vinay Shetty 9821187799**

Ashwamedh Apts., Ram Maruti Cross Road,
Naupada, Thane - 400 602. **Phone : 2540 8356**



YUVIKA 2024 SOLO DANCE 2ND PRIZE - ANAGHA RAI



YUVIKA SOLO DANCE 4TH PLACE - SASHVITHA SHETTY



FINISHING TOUCH PROGRAM ORGANISED FOR STUDENTS APPEARING FOR 12TH


eka dental care

ನಾವು ಉನ್ನತ ಗುಣಮಟ್ಟದ ದಂತ ಆರೈಕೆಯನ್ನು ಅತ್ಯಂತ ಕೈಗೆಟುಕುವ ಶುಲ್ಕದಲ್ಲಿ ಒದಗಿಸುತ್ತೇವೆ

60% less fees compared to standard fees.

MONDAY TO SATURDAY 9am to 10pm

SUNDAYS 9am to 1pm

Cleaning Rs.450 | Root Canal Rs. 1,650 | Implants Rs. 15,400 | Ceramic Crown (cap) Rs.2,800 | Metal Braces Rs.16,000 | Metal Cap 1,000 | Dentures Rs. 8,800

Scan QR code to view all treatment prices.

FREE CONSULTATION! 744 93 744 63

M.G.Road, Mulund (W) | Pant Nagar, Ghatkopar (E) | Anand Nagar, Thane (W) | Naupada, Thane (W)












**A Multicuisine Restaurant | Indian | Chinese | Continental**
**Vegetarian | Non Vegetarian Dishes**

**Banquet Hall Available (Palm Court / Flurries / Z+ (Function Hall)**
**Capacity of 50 to 500 Guest | Free Wifi | Free Parking**

VIHANG'S
INN

Opp. Cine Wonder Mall, Next to Vijay Sales, Ghodbunder Road, Thane (West) 400 607.
Contact : +91 22 5842030 / 41124110 / 41124111 / 41124112.
Email: Vihangkuberhospitality@yahoo.com Web Site : http://www.vihangshinn.co.in

If undelivered
please return to :

THANE BUNTS ASSOCIATION
101, Jai Shankar CHS Ltd.,
Opp. Axis Bank, LBS Marg,
Hari Niwas, Thane (W) - 400602.

DESIGNED & PRINTED AT : NAVIN PRINTERS, MUMBAI - 16 PH.: 98332 15105 / 98923 21121 E-mail: nvnprint@gmail.com